arvindlimbavali.official bjparvind



# ಭಾರತೀಯ ಜನತಾ ಪಾರ್ಟಿ

## ಮಹದೇವಪುರ ವಿಧಾನಸಭಾ ಕ್ಷೇತ್ರ

# ಜನಾಶಯ

# 2018-2023

## ಬರೆಯಿರಿ ನಿಮ್ಮದೇ ನೀಲನಕಾಶೆ!

## ಮಹದೇವಪುರ ಅಭ್ಯುದಯದ ಭರವಸೆ!!

**ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ, ಅಸಹಕಾರ, ನಿರ್ಲಕ್ಷ್ಯ, ಅಡ್ಡಗಾಲು!**

**ಆದರೂ ನಾವು ಮುನ್ನಡೆದಿದ್ದೇವೆ; ಜನರಕ್ಷೆಯಿಂದಾಗಿ ನಮಗಿಲ್ಲ ಸೋಲು!!**



# ಭಾರತೀಯ ಜನತಾ ಪಾರ್ಟಿ

## ಮಹದೇವಪುರ ವಿಧಾನಸಭಾ ಕ್ಷೇತ್ರ

# ಜನಾಶಯ

## 2018-2023

**ಬರೆಯಿರಿ ನಿಮ್ಮದೇ ನೀಲನಕಾಶೆ!**

**ಮಹದೇವಪುರ ಅಭ್ಯುದಯದ ಭರವಸೆ!!**

### ಮಹದೇವಪುರದ ಸಾರ್ವಜನಿಕರೇ, ನಮಸ್ಕಾರಗಳು.

**ಬೆಂಗಳೂರಿನ ಐಟಿ ರಂಗದ ಕೇಂದ್ರಬಿಂದುವಾಗಿರುವ ಮಹದೇವಪುರ ವಿಧಾನಸಭಾ ಕ್ಷೇತ್ರವನ್ನು ಬೆಂಗಳೂರಿನ ಮಾದರಿ ಕ್ಷೇತ್ರವನ್ನಾಗಿಸಲು ನಿಮ್ಮ ಸಹಭಾಗಿತ್ವವು ಮುಂದುವರಿಯಬೇಕೆಂದು ಕೋರುತ್ತಿದ್ದೇವೆ. ಭಾರತದ ಅಭ್ಯುದಯಕ್ಕೆ, ಕರ್ನಾಟಕದ ಏಳಿಗೆಗೆ, ಮಹದೇವಪುರ ಕ್ಷೇತ್ರದ ಪ್ರಗತಿಗೆ ಭಾರತೀಯ ಜನತಾ ಪಾರ್ಟಿಯ ನೇತೃತ್ವದ ಕೇಂದ್ರ, ರಾಜ್ಯ ಸರ್ಕಾರಗಳು ನೀಡಿರುವ ಅಸಾಮಾನ್ಯ ಕೊಡುಗೆಗಳನ್ನು ನೀವು ಗುರುತಿಸಬೇಕು, ತನ್ಮೂಲಕ ಬಿಜೆಪಿಗೆ ನೀವು ನೀಡುತ್ತಿರುವ ಆಶೀರ್ವಾದ – ಬೆಂಬಲವನ್ನು ಮುಂದುವರಿಸಬೇಕು ಎಂಬುದೇ ನಮ್ಮ ವಿನಮ್ರ ಮನವಿ.**

**ಮುಂಚೂಣಿಯಲ್ಲಿ ಮಹದೇವಪುರ**

ಮಹದೇವಪುರ ವಿಧಾನಸಭಾ ಕ್ಷೇತ್ರವು ಮಾಹಿತಿ ತಂತ್ರಜ್ಞಾನ (ಐಟಿ), ಸಾಫ್ಟ್‌ವೇರ್ ಹಾಗೂ ಇತರೆ ಉದ್ಯಮಗಳಲ್ಲಿ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರವಾಗಿದೆ. ಅಲ್ಲದೆ ಕರ್ನಾಟಕ ರಾಜ್ಯದಲ್ಲೇ ಮುಂಚೂಣಿ ಸ್ಥಾನದಲ್ಲಿದೆ. 2008–13ರ ಅವಧಿಯ ಬಿ.ಜೆ.ಪಿ ಆಡಳಿತದಲ್ಲಿ ಮಹದೇವಪುರ ಕ್ಷೇತ್ರಕ್ಕೆ ಸಾವಿರಾರು ಕೋಟಿ ರೂ. ಅನುದಾನ ಹರಿದು ಬಂತು. ಅದರ ಫಲವಾಗಿ ಕ್ಷೇತ್ರದಲ್ಲಿ ಹಿಂದೆಂದೂ ಕಾಣದಂತಹ ಅಭಿವೃದ್ಧಿ ಕಾಮಗಾರಿಗಳು ನಡೆದವು. ಮಹದೇವಪುರ ಕ್ಷೇತ್ರವು ಈಗಾಗಲೇ ಅಭಿವೃದ್ಧಿಯಲ್ಲಿ ಮಾದರಿ ಕ್ಷೇತ್ರವಾಗಿ ರೂಪುಗೊಳ್ಳುತ್ತಿದೆ. ಕಳೆದ ಹತ್ತು ವರ್ಷಗಳಿಂದ ಮಹದೇವಪುರ ವಿಧಾನಸಭಾ ಕ್ಷೇತ್ರದ ಬಿ.ಜೆ.ಪಿ ಶಾಸಕನಾಗಿರುವ ನನಗೆ ಕ್ಷೇತ್ರದ ಅಭಿವೃದ್ಧಿಗೆ, ಜನರ ಸೌಕರ್ಯಗಳಿಗೆ ದುಡಿದ ಹೆಮ್ಮೆ, ಖುಷಿ ಇದೆ. ಜನಪರ ಕೆಲಸಗಳನ್ನು ಕೈಗೊಂಡು ಸರ್ಕಾರ ಹಾಗೂ ಸಮಾಜದ ಮಧ್ಯದ ಕೊಂಡಿಯಾಗಿ, ಸಮಾಜಮುಖಿ ಶಾಸಕನಾಗಿ ದುಡಿಯುತ್ತಿರುವ ತೃಪ್ತಿ ನನ್ನದಾಗಿದೆ.

ಡಿಜಿಟಲ್ ಭಾರತದ ನವನಿರ್ಮಾಣದ ಈ ಹೊತ್ತಿನಲ್ಲಿ ಮಹದೇವಪುರದಲ್ಲಿ ಮಾಡಬಹುದಾದ ಅಭಿವೃದ್ಧಿ ಕಾರ್ಯಗಳು ಇನ್ನೂ ಸಾಕಷ್ಟಿವೆ. ಇರುವ ಸೌಕರ್ಯಗಳಲ್ಲಿ ಉತ್ಕೃಷ್ಟ ಗುಣಮಟ್ಟ ಸಾಧಿಸುವುದು, ಹೊಸ ಮತ್ತು ಅತ್ಯಾಧುನಿಕ ಸೇವೆಗಳನ್ನು ವೈಜ್ಞಾನಿಕವಾಗಿ ಜಾರಿಗೊಳಿಸುವುದು – ಇದು ನಮ್ಮ ಆಶಯವಾಗಿದೆ.

ಈ ಹಿನ್ನೆಲೆಯಲ್ಲಿ ತಾವೆಲ್ಲರೂ ಈ ಜನಾಶಯ ಪತ್ರವನ್ನು ತುಂಬಿಕೊಟ್ಟು ಮಹದೇವಪುರದ ಅಭ್ಯುದಯದ ಹಾದಿಯಲ್ಲಿ ಕೈಜೋಡಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ. ನಿಮ್ಮೆಲ್ಲರ ಅಭಿಮತವನ್ನು ಸಂಗ್ರಹಿಸಿ, ಕ್ರೋಢೀಕರಿಸಿ, ಚರ್ಚಿಸಿ ಮಹದೇವಪುರದ ಅಭ್ಯುದಯದ ನೀಲನಕಾಶೆಯನ್ನು ರೂಪಿಸಲಾಗುತ್ತದೆ.ನೀವು ನಿಮ್ಮ ಸಲಹೆಗಳನ್ನು arvindlimbavali@gmail.com ಈ ಇ–ಮೈಲ್ ವಿಳಾಸಕ್ಕೂ ಕಳಿಸಬಹುದು. ಅಥವಾ https://goo.gl/forms/jAZoRMbuvAEfTBeF2 ಈ ಆನ್‌ಲೈನ್ ಅರ್ಜಿಯನ್ನು ತುಂಬಿಸಿ ಕಳಿಸಬಹುದು. ಎಲ್ಲರ ರಚನಾತ್ಮಕ ಸಲಹೆಗಳನ್ನೂ ಸಕಾರಾತ್ಮಕವಾಗಿ ಸ್ವೀಕರಿಸಲಾಗುವುದು.

**ಬನ್ನಿ, ಮಹದೇವಪುರವನ್ನು ಬೆಂಗಳೂರಿನ ಅಭಿವೃದ್ಧಿ ಮುಕುಟಮಣಿ ಮಾಡೋಣ.**

ಎಂದೆಂದಿಗೂ ನಿಮ್ಮವರೇ,

| | | |
|---|---|---|
| **(ಬಿ.ಎನ್. ನಟರಾಜ್)** | **(ಬಿ.ಕೆ. ರಾಜಾರೆಡ್ಡಿ)** | **(ಅರವಿಂದ ಲಿಂಬಾವಳಿ)** |
| **ಅಧ್ಯಕ್ಷರು** | **ಅಧ್ಯಕ್ಷರು** | **ಶಾಸಕರು, ಮಹದೇವಪುರ** |
| **ಬಿಜೆಪಿ, ಮಹದೇವಪುರ ಗ್ರಾಮಾಂತರ** | **ಬಿಜೆಪಿ, ಮಹದೇವಪುರ ವಿಧಾನಸಭಾ ಕ್ಷೇತ್ರ** | |



# ಮೋದಿ ಹಾದಿ: ಭಾರತದ ಪ್ರಗತಿಗೆ ನಾಂದಿ

ಎಲ್ಲಾ ಧರ್ಮ ಮತ್ತು ಸಮುದಾಯಗಳು ಸಮಾನ ಹಕ್ಕನ್ನು ಹೊಂದಿದ್ದು, ಅವರೆಲ್ಲರ ಸಂಪೂರ್ಣ ರಕ್ಷಣೆಯ ಹೊಣೆ ನನ್ನದು. ಜಾತಿ, ಜನಾಂಗ ಮತ್ತು ಧರ್ಮ ಸಂಬಂಧಿತ ಯಾವುದೇ ತಾರತಮ್ಯವನ್ನು ನನ್ನ ಸರ್ಕಾರ ಸಹಿಸದು.

ನನ್ನ ಸರ್ಕಾರ ಜನಸಾಮಾನ್ಯನಿಗಾಗಿ ಶ್ರಮಿಸುತ್ತಿದೆ. ದೇಶದ ಬಡವರಿಗೆ ನಮ್ಮ ಪ್ರಮುಖ ಆದ್ಯತೆ. ಬಲಿಷ್ಠ ಮತ್ತು ಕ್ರಿಯಾಶೀಲ ಸರ್ಕಾರದ ಮೂಲಕ ಉತ್ತಮ ಆಡಳಿತ ನೀಡುವುದು ನಮ್ಮ ಆಶಯ.

ಅನುಭವ ಮತ್ತು ಶಿಕ್ಷಣದಿಂದ ಕಲಿಯುವುದು ಅತಿ ಅಗತ್ಯ. ನೀವು ನಿಮ್ಮ ಅನುಭವದಿಂದ ಎಷ್ಟು ಕಲಿಯುತ್ತೀರಿ ಎಂಬುದನ್ನು ನಿಮ್ಮ ಶಿಕ್ಷಣ ಮತ್ತು ಮೌಲ್ಯಗಳು ನಿರ್ಧರಿಸುತ್ತವೆ.

ಇಡೀ ಭಾರತವೇ ಬದಲಾವಣೆಯ ಕ್ರಾಂತಿಯ ಹಾದಿಯಲ್ಲಿ ಸಾಗುತ್ತಿದೆ. ನಮ್ಮ ನಿಮ್ಮೆಲ್ಲರ ನೆಚ್ಚಿನ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿ.ಜೆ.ಪಿ ಸರ್ಕಾರವು ದೇಶದಲ್ಲಿ ಹಿಂದೆಂದೂ ಕಾಣದಂತಹ ಅಭಿವೃದ್ಧಿ ಕ್ರಾಂತಿಯನ್ನೇ ನಡೆಸಿದೆ. ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದೇಶದ ಜನಸಾಮಾನ್ಯರಿಗಾಗಿ ಕೈಗೊಳ್ಳುತ್ತಿರುವ ಜನಹಿತಕಾರಿ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಸುಧಾರಣೆಗಳು ಇಡೀ ವಿಶ್ವದ ಗಮನ ಸೆಳೆದಿವೆ. ವಿಶ್ವದ ಜನತೆಯು ಭಾರತದತ್ತ ಅಚ್ಚರಿಯಿಂದ ನೋಡುತ್ತಿದೆ.

## ಶ್ರೀ ನರೇಂದ್ರ ಮೋದಿಜಿ ನೇತೃತ್ವದ ಬಿ.ಜೆ.ಪಿ ಕೇಂದ್ರ ಸರ್ಕಾರದ ಸಾಧನೆಗಳ ಒಂದು ಪಕ್ಷಿ ನೋಟ

- **ನೋಟುಬಂದಿ (ಡಿಮಾನಿಟೈಸೇಶನ್)**ಯಿಂದ ಕಪ್ಪುಹಣವನ್ನು ನಿಯಂತ್ರಿಸಿ ಭಾರತದ ಆರ್ಥಿಕತೆಯನ್ನು ಗಮನಾರ್ಹವಾಗಿ ಸುಧಾರಿಸಲಾಗಿದೆ. ಭಾರತದ ಹಣಕಾಸು ವ್ಯವಸ್ಥೆಯನ್ನು ಸ್ವಚ್ಛಗೊಳಿಸಲಾಗುತ್ತಿದೆ. ಈ ಕ್ರಮದಿಂದ ಭಾರತದ ಸುರಕ್ಷತೆಗೆ ವಿರೋಧಿಯಾಗಿದ್ದ ಭಯೋತ್ಪಾದನೆ ಹಾಗೂ ನಕ್ಸಲಿಸಂಗೆ ಭಾರೀ ಹೊಡೆತ ಬಿದ್ದಿದೆ.
- ಜಾಗತಿಕ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ ಭಾರತವು 60ನೆಯ ಸ್ಥಾನದಿಂದ 39ನೆಯ ಸ್ಥಾನಕ್ಕೆ ಮೇಲೇರಿದೆ.
- **'ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ'**ಯಡಿ ಆರ್ಥಿಕ ಕ್ರಾಂತಿಯಾಗಿದೆ; ಜನಸಾಮಾನ್ಯರ 29.52 ಕೋಟಿ ಬ್ಯಾಂಕ್ ಖಾತೆಗಳು ತೆರೆದಿವೆ. 22.71 ಕೋಟಿ ಕಾರ್ಡ್‌ಗಳು ವಿತರಣೆಯಾಗಿವೆ.
- **'ಮುದ್ರಾ ಯೋಜನೆ'**ಯಡಿಯಲ್ಲಿ 8.6 ಕೋಟಿ ಸಣ್ಣ ಮತ್ತು ಮಧ್ಯಮ ವ್ಯಾಪಾರಿಗಳಿಗೆ3.98 ಲಕ್ಷ ಕೋಟಿ ರೂ. ಸಾಲ ವಿತರಣೆಯಾಗಿದ್ದು, ಇದರಲ್ಲಿ ಶೇಕಡ 55ರಷ್ಟು ಫಲಾನುಭವಿಗಳು ದಲಿತರು ಹಾಗೂ ಬುಡಕಟ್ಟು ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ; ಶೇಕಡಾ 70ರಷ್ಟು ಫಲಾನುಭವಿಗಳು ಮಹಿಳೆಯರು.
- ಪ್ರಧಾನಮಂತ್ರಿ ಜನಸುರಕ್ಷಾ ಯೋಜನೆಯಡಿ 14.99 ಕೋಟಿ ನಾಗರಿಕರಿಗೆ ವಿಮೆ ಸೌಲಭ್ಯ ದೊರೆತಿದೆ.
- ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ 47 ಲಕ್ಷ ಬಡ ಕುಟುಂಬಗಳಿಗೆ ಮನೆಗಳು ನಿರ್ಮಾಣವಾಗಿವೆ.
- **'ಯುವ ಭಾರತ್ ಶ್ರೇಷ್ಠ ಭಾರತ್ – ದೀನದಯಾಳ್ ಗ್ರಾಮೀಣ ಕೌಶಲ್ಯ ಯೋಜನೆ'**ಯಡಿಯಲ್ಲಿ ಲಕ್ಷಾಂತರ ಯುವಕರಿಗೆ ಉದ್ಯೋಗ ಸಿಕ್ಕಿದೆ; ಸ್ವಉದ್ಯೋಗ ಯೋಜನೆಗಳು, ಕೌಶಲ್ಯ ತರಬೇತಿ, 'ಮೇಕ್ ಇನ್ ಇಂಡಿಯಾ' ಮತ್ತು 'ಸ್ಕಿಲ್ ಇಂಡಿಯಾ' ಗೆ ಒತ್ತು ನೀಡಲಾಗಿದೆ.
- ಪ್ರಧಾನಮಂತ್ರಿ ಕೌಶಲ್ಯ ಯೋಜನೆಯಡಿಯಲ್ಲ 52.8 ಲಕ್ಷ ಯುವಕರಿಗೆ ಉದ್ಯೋಗ ತರಬೇತಿ ನೀಡಿದ್ದು ಒಂದು ಕೋಟಿ ಯುವಕರಿಗೆ ಉದ್ಯೋಗ ತರಬೇತಿ ನೀಡುವ ಗುರಿ ಹೊಂದಲಾಗಿದೆ.
- **'ಬೇಟಿ ಬಚಾವೋ, ಬೇಟಿ ಪಡಾವೋ'** ಹಾಗೂ **'ಇಂದ್ರಧನುಷ್'** ಯೋಜನೆಗಳಡಿಯಲ್ಲಿ ಹೆಣ್ಣು ಭ್ರೂಣಹತ್ಯೆ ತಡೆಗೆ ಒತ್ತು ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ.
- ದೇಶಕ್ಕೆ ಸ್ವಾತಂತ್ರ್ಯ ಬಂದು 69 ವರ್ಷಗಳು ಕಳೆದರೂ ವಿದ್ಯುಚ್ಛಕ್ತಿ ಕಾಣದಿದ್ದ 18,000 ಹಳ್ಳಿಗಳ ಪೈಕಿ 14,028 ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆ. ಉಳಿದ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ಪ್ರಗತಿಯಲ್ಲಿದೆ.
- **'ದೀನದಯಾಳ್ ಅಂತ್ಯೋದಯ ಯೋಜನೆ'**ಯಡಿಯಲ್ಲಿ 1.20 ಲಕ್ಷ ಕುಟುಂಬಗಳಿಗೆ ರೂ. 69,000 ಕೋಟಿ ಸಾಲ ಸೌಲಭ್ಯ ನೀಡಲಾಗಿದೆ.

ಸಮಾಜದ ದಲಿತ ಹಿಂದುಳಿದ ವರ್ಗಗಳಿಗೆ ಹಲವಾರು ಯೋಜನೆಗಳು ಜಾರಿಯಾಗಿವೆ.

- **'ಪ್ರಧಾನಮಂತ್ರಿ ಉಜ್ವಲ ಯೋಜನೆ'**ಯಡಿಯಲ್ಲಿ 3 ಕೋಟಿ ಬಡ ಹೆಣ್ಣುಮಕ್ಕಳಿಗೆ ಎಲ್.ಪಿ.ಜಿ ಕನೆಕ್ಷನ್‌ಗಳ ಸೌಲಭ್ಯ.
- ಭಾರತವು ಜಗತ್ತಿನಲ್ಲಿ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಅರ್ಥಿಕತೆಯ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
- **'ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ'**ಯಡಿಯಲ್ಲಿ 37 ಕೋಟಿ ರೈತರಿಗೆ ವಿಮಾ ಸೌಲಭ್ಯ
- **'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ'**ಯಡಿಯಲ್ಲಿ 15.86 ಲಕ್ಷ ಎಕರೆ ಭೂಮಿಗೆ ಡ್ರಿಪ್ ಇರಿಗೇಷನ್ ಹಾಗೂ 7.10 ಕೋಟಿ ಮಣ್ಣು ಆರೋಗ್ಯ ಕಾರ್ಡ್‌ಗಳ ವಿತರಣೆಯಾಗಿದೆ.
- **'ಸ್ವಚ್ಛ ಭಾರತ್ ಅಭಿಯಾನ'** 2.05 ಲಕ್ಷ ಹಳ್ಳಿಗಳಲ್ಲಿ ಹಾಗೂ 480 ಪಟ್ಟಣಗಳಲ್ಲಿ 4.3 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ; 2,60,000 ಶಾಲೆಗಳಲ್ಲಿ 4,10,000 ಶೌಚಾಲಯಗಳ ನಿರ್ಮಾಣವಾಗಿದೆ.
- ಪವಿತ್ರ ಗಂಗಾ ನದಿಯ ನೈರ್ಮಲ್ಯಕ್ಕಾಗಿ **'ನಮಾಮಿ ಗಂಗೆ ಯೋಜನೆ'** ಆರಂಭವಾಗಿದೆ.
- ಶ್ರೀ ನರೇಂದ್ರ ಮೋದಿಯವರ ಪ್ರಯತ್ನದಿಂದ ಜೂನ್ 21ನ್ನು ವಿಶ್ವ ಸಂಸ್ಥೆಯು ಅಂತರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಿಸಲಾಗಿದೆ.
- **ಡಿಜಿಟಲ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾ** ಹಾಗೂ **ಸ್ಕಿಲ್ ಇಂಡಿಯಾ**ದಂತಹ ಯೋಜನೆಗಳು ಲಕ್ಷಾಂತರ ನಿರುದ್ಯೋಗಿ, ಪ್ರತಿಭಾವಂತ ಯುವಕರಿಗೆ ವರದಾನಗಳಾಗಿದೆ.
- ದೇಶದಾದ್ಯಂತ **100 ಸ್ಮಾರ್ಟ್ ಸಿಟಿಗಳ** ನಿರ್ಮಾಣಕ್ಕಾಗಿ 7,600 ಕೋಟಿ ರೂ. ಬಿಡುಗಡೆಯಾಗಿದೆ.
- ಭಾರತದ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗಾಗಿ **ಸಂಸದ್ ಆದರ್ಶ ಗ್ರಾಮ ಯೋಜನೆ** ಜಾರಿಯಾಗಿದೆ.
- ಪ್ರತಿದಿನವೂ 22 ಕಿ.ಮೀ.ಗಳಂತೆ ಈಗಾಗಲೇ ದಾಖಲೆಯ 18,700 ಕಿ.ಮೀ. **ರಾಷ್ಟ್ರೀಯ ಹೆದ್ದಾರಿ** ನಿರ್ಮಾಣವಾಗಿದ್ದು ಉಳಿದ ಕೆಲಸ ಭರದಿಂದ ನಡೆದಿದೆ.
- **ದೂರಸಂಪರ್ಕ ತರಂಗಗಳ ಸ್ಪೆಕ್ಟ್ರಮ್ ಹರಾಜಿನಲ್ಲಿ** 1,42,434 ಕೋಟಿ ರೂ. ವರಮಾನ ದೊರೆತಿದೆ.
- **ಕಲ್ಲಿದ್ದಲಿನ ಗಣಿಗಳ ಪಾರದರ್ಶಕ ಹರಾಜಿನಲ್ಲಿ** 2 ಲಕ್ಷ ಕೋಟಿ ರೂ. ಅದಾಯ ಬಂದಿದೆ.
- **ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ**ಯಡಿಯಲ್ಲಿ ದಿನಕ್ಕೆ 133 ಕಿ.ಮೀ. ರಸ್ತೆ ನಿರ್ಮಾಣದಂತೆ ಈವರೆಗೆ 1,20,233 ಕಿ.ಮೀ ಗ್ರಾಮೀಣ ರಸ್ತೆಗಳ ನಿರ್ಮಾಣವಾಗಿದೆ.
- **ಜಿಎಸ್‌ಟಿ** ಎಂಬ ಹೊಸ ತೆರಿಗೆ ವ್ಯವಸ್ಥೆಯ ಮೂಲಕ ಐತಿಹಾಸಿಕ ಆರ್ಥಿಕ ಸುಧಾರಣೆ ಕೈಗೊಳ್ಳಲಾಗಿದೆ.
- ಉಜಾಲಾ ಯೋಜನೆಯಡಿ 21.7 ಕೋಟಿ ಇಂಧನ ಸ್ನೇಹಿ ದಕ್ಷ ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸಲಾಗಿದೆ. ಇದರಿಂದ ವರ್ಷಂಪ್ರತಿ 28 ದಶಲಕ್ಷ ಕಿಲೋವಾಟ್‌ಅವರ್(ಕೆಡಬ್ಲ್ಯುಎಚ್) ಇಂಧನ ಉಳಿತಾಯವಾಗುತ್ತಿದೆ; ಅಂದರೆ ವರ್ಷಕ್ಕೆ 11,312 ಕೋಟಿ ರೂ. ಉಳಿತಾಯ.

**ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಕಳೆದ ಮೂರೂವರೆ ವರ್ಷಗಳ ಆಡಳಿತದಲ್ಲಿ ಒಂದಿನಿತೂ ಭ್ರಷ್ಟಾಚಾರಕ್ಕೆ ಆಸ್ಪದ ಕೊಡದೆ ಅತ್ಯಂತ ಪ್ರಾಮಾಣಿಕವಾದ, ಹಗರಣಗಳಿಂದ ಮುಕ್ತವಾದ ಕ್ರಿಯಾಶೀಲ ಸರ್ಕಾರವನ್ನು ಮುನ್ನಡೆಸಿದ್ದಾರೆ. ದೂರದೃಷ್ಟಿಯ ಹತ್ತು ಹಲವು ಯೋಜನೆಗಳ ಮೂಲಕ ಭಾರತವು ಅಭ್ಯುದಯದತ್ತ ದಾಪುಗಾಲಿಟ್ಟಿದೆ. 'ಎಲ್ಲರೊಂದಿಗೆ, ಎಲ್ಲರ ವಿಕಾಸ' ಎಂಬ ಘೋಷಣೆಯನ್ನು ಶ್ರೀ ನರೇಂದ್ರ ಮೋದಿಯವರು ಸಾಕಾರಗೊಳಿಸಿದ್ದಾರೆ.**




Pradhan Mantri Kaushal Kendra

Skill India

कौशल भारत-कुशल भारत

## ಮಹದೇವಪುರ ಕ್ಷೇತ್ರದಲ್ಲಿ ಪ್ರಧಾನಮಂತ್ರಿ ಕೌಶಲ್ಯ ಕೇಂದ್ರ ಸ್ಥಾಪನೆ

- ಭಾರತವನ್ನು ಜಗತ್ತಿನ ಕೌಶಲ್ಯ ಕೇಂದ್ರವನ್ನಾಗಿ ರೂಪಾಂತರಿಸಲೆಂದೇ ವೃತ್ತಿ ಶಿಕ್ಷಣವನ್ನು ಇನ್ನಷ್ಟು ಆಕರ್ಷಕಗೊಳಿಸಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಇದರ ಭಾಗವಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯವು ದೇಶದ ಪ್ರತಿಯೊಂದೂ ಜಿಲ್ಲೆಯಲ್ಲಿ ಮಾದರಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಅತ್ಯಾಧುನಿಕವಾದ ಸೌಲಭ್ಯಗಳನ್ನು ಹೊಂದಿರುವ ಈ ಕೇಂದ್ರಗಳನ್ನು ಪ್ರಧಾನಮಂತ್ರಿ ಕೌಶಲ್ಯ ಕೇಂದ್ರ (ಪಿಎಂಕೆಕೆ) ಎಂದು ಕರೆಯಲಾಗಿದೆ.
- ಅರ್ಹತೆ ಆಧಾರಿತ ಕೌಶಲ್ಯ ತರಬೇತಿ ನೀಡಿಕೆ, ಕೌಶಲ್ಯ ತರಬೇತಿಯಲ್ಲಿ ಗುಣಮಟ್ಟ, ಸುಸ್ಥಿರತೆ ಸಾಧಿಸುವುದು, ಸುಸ್ಥಿರ ಸಾಂಸ್ಥಿಕ ಮಾದರಿಯನ್ನು ರೂಪಿಸುವುದು – ಇವೇ ಪಿಎಂಕೆಕೆಯ ಉದ್ದೇಶಗಳು.
- ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಪಿಎಂಕೆಕೆ ಕೇಂದ್ರವು ಮಹದೇವಪುರ ವಿಧಾನಸಭಾ ಕ್ಷೇತ್ರದ ಕುಂದಲಹಳ್ಳಿಯಲ್ಲಿ 2018ರ ಜನವರಿ 6ರಂದು ಉದ್ಘಾಟನೆಗೊಂಡಿದೆ.

# ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿ ನೇತೃತ್ವದ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಕೊಡುಗೆ

**ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಬಿ.ಜೆ.ಪಿ ಸರ್ಕಾರವು ಕರ್ನಾಟಕದ ಅಭಿವೃದ್ಧಿಗಾಗಿ ನೀಡಿರುವ ಅನುದಾನ ಅಪಾರವಾಗಿದೆ. ಇದು ಕೇಂದ್ರದ ಬಿ.ಜೆ.ಪಿ ಸರ್ಕಾರಕ್ಕೆ ಕರ್ನಾಟಕದ ಬಗ್ಗೆ ಇರುವ ಪ್ರಾಮಾಣಿಕ ಕಳಕಳಿಯನ್ನು ತೋರಿಸುತ್ತದೆ.**

- ಬಿ.ಜೆ.ಪಿ ನೇತೃತ್ವದ ಕೇಂದ್ರ ಸರ್ಕಾರವು ಇಲ್ಲಿಯವರೆಗೆ **ಕರ್ನಾಟಕಕ್ಕೆ 2,49,393 ಕೋಟಿ ರೂ.ಗಳ ಅನುದಾನವನ್ನು** ಈಗಾಗಲೇ ನೀಡಿದೆ.
- **ಕರ್ನಾಟಕದ ರೈತರಿಗಾಗಿ 31 ಕೋಟಿ ರೂ.** ಹಣ ಬಿಡುಗಡೆ, 50.56 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳ (Soil Health Card) ವಿತರಣೆ.
- ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 405 ಕೋಟಿ ರೂ. ನೀಡಿ 2,85,878 ಎಕರೆ ಪ್ರದೇಶವನ್ನು ಅತಿ ಸಣ್ಣ ನೀರಾವರಿ ಯೋಜನೆಯಡಿ ತರಲಾಗಿದೆ.
- ಹಗರಣಗಳ ಕೇಂದ್ರವಾಗಿದ್ದ **ಕರ್ನಾಟಕದ ಗಣಿಗಳನ್ನು ಪಾರದರ್ಶಕವಾಗಿ ಹಂಚಿಕೆ ಮಾಡಿ** 'ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ' ಯಡಿ 209 ಕೋಟಿ ರೂ. ಸಂಗ್ರಹಿಸಲಾಗಿದೆ; ಗಣಿಗಳ ಗುತ್ತಿಗೆ ಅವಧಿ ಮುಗಿಯುವುದರಲ್ಲಿ ರಾಜ್ಯದ ಬೊಕ್ಕಸಕ್ಕೆ 34,353 ಕೋಟಿ ರೂ. ಆದಾಯ ಹರಿದು ಬರಲಿದೆ.
- ಕಡಿಮೆ ಖರ್ಚಿನಲ್ಲಿ ಕರ್ನಾಟಕಕ್ಕೆ ಬೆಳಕಿತ್ತ 'ಉಜಾಲ' ಯೋಜನೆಯಡಿಯಲ್ಲಿ ಕೇಂದ್ರ ಬಿ.ಜೆ.ಪಿ ಸರ್ಕಾರವು ರಾಜ್ಯದಲ್ಲಿ **1.65 ಕೋಟಿ ಎಲ್.ಇ.ಡಿ ಬಲ್ಬ್ ವಿತರಣೆ** ಮಾಡಿದೆ. ಇದರಿಂದ ರಾಜ್ಯಕ್ಕೆ **ವರ್ಷಕ್ಕೆ 862 ಕೋಟಿ ರೂ. ಉಳಿಯುತ್ತಿದೆ.** ಅಲ್ಲದೆ ವರ್ಷಕ್ಕೆ 21.54 ಲಕ್ಷ ಮೆಗಾವ್ಯಾಟ್ ವಿದ್ಯುತ್ ಉಳಿತಾಯವಾಗಿದೆ.
- ಕರ್ನಾಟಕದಲ್ಲಿ **ಇಂಧನ ಉತ್ಪಾದನಾ ಸಾಮರ್ಥ್ಯವನ್ನು** 14,269 ಮೆಗಾವಾಟ್‌ನಿಂದ 21,316 ಮೆಗಾವಾಟ್‌ಗೆ ಹೆಚ್ಚಿಸಿ ಇಂಧನ ಉಳಿತಾಯವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಇದರಿಂದ ಒಟ್ಟು 4,300 ಕೋಟಿ ರೂ.ಗಳ ಲಾಭ ಅಂದಾಜು ಮಾಡಿದ್ದು ಪ್ರತಿವರ್ಷವೂ ಸುಮಾರು 6,700 ಕೋಟಿ ರೂ. ಉಳಿತಾಯವಾಗಲಿದೆ.
- **ಸ್ವಚ್ಛ ಭಾರತ್ ಮಿಶನ್ ಅಭಿಯಾನಕ್ಕಾಗಿ** ಕರ್ನಾಟಕಕ್ಕೆ 204 ಕೋಟಿ ರೂ.ಗಳನ್ನು ನೀಡಲಾಗಿದೆ.
- **ಮುದ್ರಾ ಯೋಜನೆಯಡಿ** ಕರ್ನಾಟಕದ ಉದ್ಯಮಿಗಳಿಗೆ ಮೋದಿಜಿ ಶಕ್ತಿ ತುಂಬಿದ್ದಾರೆ; ಈ ಯೋಜನೆಯಡಿಯಲ್ಲಿ 97.73 ಲಕ್ಷ ಫಲಾನುಭವಿಗಳಿಗೆ 39,443 ಕೋಟಿ ರೂ. ಸಹಾಯಧನ ವಿತರಣೆಯಾಗಿದೆ.
- **ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ** ಕರ್ನಾಟಕದಲ್ಲಿ ಮನೆಗಳ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ 1841.31 ಕೋಟಿ ರೂ. ಬಿಡುಗಡೆಯಾಗಿ 1,22,754 ಮನೆಗಳ ನಿರ್ಮಾಣಕ್ಕಾಗಿ 708 ಯೋಜನೆಗಳು ಅನುಮೋದನೆಗೊಂಡಿವೆ.

## ಕರ್ನಾಟಕದ ಮೂಲಭೂತ ಸೌಕರ್ಯಗಳಿಗೆ ಸಹಾಯ ಹಸ್ತ

- 50 ವಿವಿಧ ಜಿಲ್ಲಾ ಯೋಜನೆಗಳ ಅಡಿಯಲ್ಲಿ **3546 ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ** 27,482 ಕೋಟಿ ರೂ. ಅನುದಾನ
- **ರೈಲ್ವೆ ಸೌಕರ್ಯಗಳಿಗಾಗಿ** ಮೋದಿ ಸರ್ಕಾರದಿಂದ 2197 ಕೋಟಿ ರೂ. ಬಿಡುಗಡೆ
- ದಾವಣಗೆರೆ ಮತ್ತು ಬೆಳಗಾವಿಗಳ **ಸ್ಮಾರ್ಟ್ ಸಿಟಿ ಅಭಿವೃದ್ಧಿಗಾಗಿ** 960.00 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ.
- **ಬೆಂಗಳೂರು ಮೆಟ್ರೋ ರೈಲು** ಯೋಜನೆಯಲ್ಲಿ 148 ಕಿ.ಮೀಗಳ ಮೂರು ಹೊಸ ಮಾರ್ಗಗಳು ಆರಂಭವಾಗಿದ್ದು ಕಳೆದ ಎರಡು ವರ್ಷಗಳಲ್ಲಿ ಮೆಟ್ರೋ ಯೋಜನೆಗಾಗಿ 2,617.65 ಕೋಟಿ ರೂ. ನೀಡಲಾಗಿದೆ.
- **ಪ್ರಧಾನಮಂತ್ರಿ ಜನ್‌ಧನ್ ಯೋಜನೆಯಡಿಯಲ್ಲಿ** ರಾಜ್ಯದ 1.01 ಕೋಟಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ; ಅವರ ಉಳಿತಾಯ ಖಾತೆಯಲ್ಲಿ 2,312 ಕೋಟಿ ಹಣ ಸಂಗ್ರಹವಾಗಿದ್ದು ಹಾಗೂ 87.72 ಲಕ್ಷ ರೂಪೈ ಕಾರ್ಡ್‌ಗಳನ್ನು ವಿತರಿಸಲಾಗಿದೆ.
- **ಪ್ರಧಾನಮಂತ್ರಿ ಉಜ್ವಲಾ ಯೋಜನೆ:** ಕರ್ನಾಟಕದಲ್ಲಿ ಬಿಪಿಎಲ್ ಕಾರ್ಡ್‌ದರರಿಗೆ 3.33 ಲಕ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 1.39 ಲಕ್ಷ ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಲಾಗಿದೆ.

**ಹೀಗೆ ಶ್ರೀ ನರೇಂದ್ರ ಮೋದಿಜಿ ನೇತೃತ್ವದ ಕೇಂದ್ರ ಸರ್ಕಾರವು ಯಾವುದೇ ಪಕ್ಷ ರಾಜಕೀಯ ಮಾಡದೆಯೇ ಕರ್ನಾಟಕಕ್ಕೆ ನೆರವಿನ ಮಹಾಪೂರವನ್ನೇ ಹರಿಸಿದೆ.**

SOIL HEALTH CARD
Swasth Dhara, Khet Haraa

Pradhan Mantri Krishi Sinchayee Yojana (PMKSY)

Smart City
MISSION TRANSFORM-NATION

PRADHAN MANTRI JAN-DHAN YOJANA
MERA KHATA BHAGYA VIDHATA

mudra

Digital India
Power To Empower

UJALA
DELP

बेटी बचाओ
बेटी पढ़ाओ

PAHAL



# ಮಹದೇವಪುರ ವಿಧಾನಸಭಾ ಕ್ಷೇತ್ರ: ಅಭಿವೃದ್ಧಿ ಪರ್ವ

ನಾನು ಕಳೆದ ಹತ್ತು ವರ್ಷಗಳಿಂದ ಪ್ರತಿನಿಧಿಸುತ್ತಿರುವ ಮಹದೇವಪುರ ಕ್ಷೇತ್ರದಲ್ಲಿ ನಡೆದಿರುವ/ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಜನಪರ ಕಾಮಗಾರಿಗಳ ಒಂದು ಸ್ಥೂಲ ಚಿತ್ರಣವನ್ನು ನಿಮ್ಮ ಮುಂದಿಡಲು ಸಂತಸವಾಗುತ್ತಿದೆ.



## ಕೆರೆಗಳ ಅಭಿವೃದ್ಧಿ, ಸಾರ್ವಜನಿಕ ಜಾಗ ರಕ್ಷಣೆ





### ಕೆರೆಗಳ ಅಭಿವೃದ್ಧಿ

ಕೈಕೊಂಡರಹಳ್ಳಿ ಕೆರೆ, ಅಂಬಲೀಪುರ ಕೆರೆ, ಹರಳೂರು ಕೆರೆ, ಕಸವನಹಳ್ಳಿ ಕೆರೆ, ದೊಡ್ಡಕನ್ನಲ್ಲಿ ಕೆರೆ, ಮುನ್ನೆಕೊಳಾಲು ಕೆರೆ, ಚಿನ್ನಪ್ಪನಹಳ್ಳಿ ಕೆರೆ, ದೊಡ್ಡನೆಕ್ಕುಂದಿ ಕೆರೆ, ಕುಂದಲಹಳ್ಳಿ ಕೆರೆ ಹಾಗೂ ಶೀಲವಂತನ ಕೆರೆಗಳ ಅಭಿವೃದ್ಧಿಯಾಗಿದೆ, ಸಿದ್ಧಾಪುರ ಕೆರೆ, ಪಣತ್ತೂರು ಕೆರೆ, ಹೂಡಿ ಕೆರೆ, ದೇವರಬಿಸನಹಳ್ಳಿ ಕೆರೆ, ಗರುಡಾಚಾರ್‌ಪಾಳ್ಯ ಕೆರೆಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಎಲ್ಲಾ ಕೆರೆಗಳ ಒತ್ತುವರಿ ತೆರವುಗೊಳಿಸಿ ತಂತಿಬೇಲಿ ಕಾಂಪೌಂಡ್ ನಿರ್ಮಿಸಲಾಗಿದೆ. ಹೂಡಿ ಕೆರೆ, ಸಾದರಮಂಗಲ ಕೆರೆ ಹಾಗೂ ಭೋಗನಹಳ್ಳಿ ಕೆರೆಗಳ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಲಿದೆ. ಉಳಿದ ಕೆರೆಗಳನ್ನು ಸಹ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

### 130ಕ್ಕೂ ಹೆಚ್ಚು ಶಾಲಾ ಕೊಠಡಿಗಳ ನಿರ್ಮಾಣ

- ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇರುವುದನ್ನು ಅರಿತು ಸುಮಾರು 130ಕ್ಕೂ ಹೆಚ್ಚು ಶಾಲಾ ಕೊಠಡಿಗಳನ್ನು ಸರ್ಕಾರ ಮತ್ತು ಪಿ.ಪಿ.ಪಿ ಮಾದರಿಯಲ್ಲಿ ನಿರ್ಮಿಸಿ ಕೊಠಡಿಗಳ ಸಮಸ್ಯೆಯನ್ನು ಪರಿಹರಿಸಲಾಗಿದೆ.

### ಆಂಗ್ಲ ಮಾಧ್ಯಮ ತರಗತಿಗಳು

- ಕ್ಷೇತ್ರದಲ್ಲಿನ ಬಹುತೇಕ ಎಲ್ಲಾ ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ.

## ಹೂಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರತ್ಯೇಕ ಕಟ್ಟಡ




ಹೂಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣ ಮಾಡಿ ಪಾಳಿ ಪದ್ಧತಿಯಲ್ಲಿ ನಡೆಯುತ್ತಿದ್ದ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜನ್ನು ಬೇರ್ಪಡಿಸಿ ಪದವಿ ಪೂರ್ವ ಕಾಲೇಜನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

## ಇಮ್ಮಡಿಹಳ್ಳಿ ಮತ್ತು ಚನ್ನಸಂದ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು






ಇಮ್ಮಡಿಹಳ್ಳಿ ಮತ್ತು ಚನ್ನಸಂದ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು ಪ್ರಾರಂಭವಾಗಿವೆ, ಇಮ್ಮಡಿಹಳ್ಳಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಚನ್ನಸಂದ್ರದಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

## ವರ್ತೂರು ಮತ್ತು ಕಾಡುಗೋಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು




ವರ್ತೂರು ಮತ್ತು ಕಾಡುಗೋಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಪ್ರಾರಂಭವಾಗಿವೆ. ವರ್ತೂರು ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ; ಕಾಡುಗೋಡಿಯಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭವಾಗಬೇಕಿದೆ.

## ತೂಬರಹಳ್ಳಿಯಲ್ಲಿ ಡಿಜಿಟಲ್ ಗ್ರಂಥಾಲಯಕ್ಕೆ ಕಟ್ಟಡ ನಿರ್ಮಾಣ



ತೂಬರಹಳ್ಳಿ ಗ್ರಂಥಾಲಯ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಗ್ರಂಥಾಲಯ ಇಲಾಖೆಗೆ ಹಸ್ತಾಂತರಿಸಿದೆ.





## ಪಾದಚಾರಿ ಮೇಲು ಸೇತುವೆಗಳು



ಸ್ಪೈಸ್ ಗಾರ್ಡನ್

ಪಾದಚಾರಿಗಳ ಹಿತದೃಷ್ಟಿಯಿಂದ ಮಾರತ್ತಹಳ್ಳಿ ಬ್ರಿಡ್ಜ್ ಬಳಿ, ಸ್ಪೈಸ್ ಗಾರ್ಡನ್, ಹೊರ ವರ್ತುಲ ರಸ್ತೆ ಇಕೋ ಸ್ಪೇಸ್ ಬಳಿ ಪಾದಚಾರಿ ಮೇಲು ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ. ಅಲ್ಲದೆ ಹೊರ ವರ್ತುಲ ರಸ್ತೆ ಮತ್ತು ಇತರೆ ರಸ್ತೆಗಳ ಅಗತ್ಯ ಸ್ಥಳಗಳಲ್ಲಿ ಪಾದಚಾರಿಗಳ ಮೇಲು ಸೇತುವೆ ನಿರ್ಮಾಣ ಮಾಡಲು ಪ್ರಸ್ತಾವನೆ ಪ್ರಗತಿಯಲ್ಲಿದೆ.


ಮಾರತ್ತಹಳ್ಳಿ

## ರೈಲ್ವೆ ಓವರ್ ಬ್ರಿಡ್ಜ್


ಸರ್ಜಾಪುರ ಓವರ್‌ಬ್ರಿಡ್ಜ್


ಹೂಡಿ ಅಂಡರ್‌ಪಾಸ್ ಮತ್ತು ರೈಲ್ವೆ ಮೇಲುಸೇತುವೆ

ಕಾಡುಗೋಡಿ ಮತ್ತು ಹೂಡಿಯಲ್ಲಿ ಆರ್.ಓ.ಬಿ (ರೈಲ್ವೆ ಓವರ್ ಬ್ರಿಡ್ಜ್) ಮತ್ತು ಸರ್ಜಾಪುರ ರಸ್ತೆಯಲ್ಲಿ ರೈಲ್ವೇ ಮೇಲು ಸೇತುವೆ ನಿರ್ಮಾಣ ಮಾಡಿ ಸಂಚಾರವನ್ನು ಸುಗಮಗೊಳಿಸಲಾಗಿದೆ, ಕಾಡುಗೋಡಿಯಲ್ಲಿ ರೈಲ್ವೇ ಪಾದಚಾರಿ ಮೇಲು ಸೇತುವೆ ನಿರ್ಮಾಣ ಮಾಡಲಾಗಿದೆ.



ಗುಂಜೂರು


ಮಂಡೂರು

## ಬಿ.ಎಂ.ಟಿ.ಸಿ ಘಟಕಗಳು

ಮಹದೇವಪುರ ಕ್ಷೇತ್ರದ ಇ.ಪಿ.ಐ.ಪಿ ವಲಯದಲ್ಲಿ ಟಿ.ಟಿ.ಎಂ.ಸಿ, ಗುಂಜೂರು, ಮಂಡೂರು ಗ್ರಾಮಗಳಲ್ಲಿ ನೂತನ ಬಿ.ಎಂ.ಟಿ.ಸಿ ಘಟಕಗಳು ಪ್ರಾರಂಭವಾಗಿದ್ದು ಬಹುತೇಕ ಎಲ್ಲಾ ಗ್ರಾಮಗಳಿಗೆ ಬಿ.ಎಂ.ಟಿ.ಸಿ ಬಸ್ ಸೇವೆಯನ್ನು ಕಲ್ಪಿಸಲಾಗಿದೆ.

# ವಸತಿ, ಬಸ್ ತಂಗುದಾಣ, ಮೇಲುಸೇತುವೆ...

## ವಸತಿ ಸೌಕರ್ಯ

94(ಸಿ) ಮತ್ತು 94 (ಸಿಸಿ) ಅಡಿಯಲ್ಲಿ ಸರ್ಕಾರಿ ಜಾಗಗಳಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನ ನೋಂದಣಿ ಮಾಡಿಸುವ ಕಾರ್ಯ ಪ್ರಗತಿಯಲ್ಲಿದೆ.

ಮಾರತ್ತಹಳ್ಳಿ ಮತ್ತು ಸೂಲಿಕುಂಟೆಗಳಲ್ಲಿ ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ.

## ಮೇಲು ಸೇತುವೆಗಳು





ಹೊರ ವರ್ತುಲ ರಸ್ತೆ ಅಭಿವೃದ್ಧಿ ಪಡಿಸಿದ್ದು, ಬೆಳ್ಳಂದೂರು, ದೇವರಬಿಸನಹಳ್ಳಿ, ಕಾಡುಬಿಸನಹಳ್ಳಿ ಮೇಲು ಸೇತುವೆಗಳು ನಿರ್ಮಾಣವಾಗಿದ್ದು, ದೊಡ್ಡನೆಕ್ಕುಂದಿ ಬಳಿ ಮೇಲು ಸೇತುವೆ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

## ಬಸ್ ತಂಗುದಾಣಗಳು













ಗ್ರಾಮಾಂತರ ಭಾಗದ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಪ್ರಯಾಣಿಕರ ಹಿತದೃಷ್ಟಿಯಿಂದ ಬಸ್ ತಂಗುದಾಣಗಳ ನಿರ್ಮಾಣವಾಗಿದ್ದು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯ ಪ್ರಮುಖ ಸ್ಥಳಗಳಲ್ಲಿ ಬಸ್ ತಂಗುದಾಣಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

## ವಿವಿಧ ಭವನಗಳು, ಉದ್ಯಾನವನಗಳು...

- ಶಾಸಕರ ಹಾಗೂ ಸಂಸದರ ನಿಧಿಯಿಂದ ಗ್ರಾಮಾಂತರ ಭಾಗದ ಬಹುತೇಕ ಹಳ್ಳಿಗಳಲ್ಲಿ ಶಕ್ತಿ ಭವನ, ಅಂಬೇಡ್ಕರ್ ಭವನ, ಸಮುದಾಯ ಭವನ ನಿರ್ಮಿಸಲಾಗಿದೆ.
- ದೊಡ್ಡನೆಕ್ಕುಂದಿ ವಾರ್ಡಿನ ಎ.ಇ.ಸಿ.ಎಸ್ ಬಡಾವಣೆಯಲ್ಲಿ ಎರಡು ಉದ್ಯಾನವನ, ಬಿ.ಇ.ಎಂ.ಎಲ್ ಬಡಾವಣೆಯಲ್ಲಿ ಒಂದು ಉದ್ಯಾನವನ, ಅಂಬಲಿಪುರ ಹಾಗೂ ಕಾಡುಗೋಡಿಯಲ್ಲಿ ಉದ್ಯಾನವನ್ನು ಅಭಿವೃದ್ಧಿ ಪಡಿಸಲಾಗಿದೆ.





# ಸ್ವಚ್ಛತೆ, ಆರೋಗ್ಯ, ಆದರ್ಶ ಗ್ರಾಮ..

## ಪ್ರಾಥಮಿಕ ಆರೋಗ್ಯ ಕೇಂದ್ರಗಳು


ಹಾಲನಾಯಕನಹಳ್ಳಿ


ಕೊಡತಿ

ಹಾಲನಾಯಕನಹಳ್ಳಿ, ಕೊಡತಿ, ಮಾರತ್ತಹಳ್ಳಿ, ಮಂಡೂರು, ಬಿದರಹಳ್ಳಿ ಹಾಗೂ ಕಣ್ಣೂರು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇವುಗಳ ಕಟ್ಟಡ ಕಾಮಗಾರಿಗೆ ನಾನು ಆರೋಗ್ಯ ಸಚಿವನಾಗಿದ್ದಾಗಲೇ ಹಣ ಬಿಡುಗಡೆ ಮಾಡಲಾಗಿತ್ತು. ಬಿದರಹಳ್ಳಿ ಹೊರತುಪಡಿಸಿ ಉಳಿದೆಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ, ಆವಲಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಕ್ಷೇತ್ರದಲ್ಲಿನ ಬಹುತೇಕ ಎಲ್ಲಾ ಆಸ್ಪತ್ರೆಗಳಲ್ಲಿ 24/7 ಸೇವೆಯನ್ನು ಒದಗಿಸಲಾಗಿದೆ.


ಆವಲಹಳ್ಳಿ

## ಸಂಸದರ ಅದರ್ಶ ಗ್ರಾಮವಾಗಿ ಯರ್ರಪ್ಪನಹಳ್ಳಿ ಅಭಿವೃದ್ಧಿ




ಮಾನ್ಯ ಸಂಸದ ಶ್ರೀ ಪಿ.ಸಿ. ಮೋಹನ್ ಅವರ ಸಂಸದ್ ಅದರ್ಶ ಗ್ರಾಮವಾಗಿ ಯರ್ರಪ್ಪನಹಳ್ಳಿಯನ್ನು ಆಯ್ಕೆ ಮಾಡಿದ್ದು, ಸದರಿ ಗ್ರಾಮದಲ್ಲಿ ಅಗತ್ಯ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲಾಗಿದೆ.

## ಸ್ವಚ್ಛಭಾರತ ಅಭಿಯಾನ




ಸ್ವಚ್ಛಭಾರತ ಅಭಿಯಾನದಲ್ಲಿ ಸ್ವಚ್ಚತಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ವಿವಿಧ ಸಂಸ್ಥೆಗಳು ಹಾಗೂ ಕಂಪನಿಗಳ ವತಿಯಿಂದ ಎಲ್ಲಾ ಶಾಲೆಗಳಿಗೆ ಶೌಚಾಲಯ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.



ಪಣತ್ತೂರಿನಲ್ಲಿ ವಿದ್ಯುತ್ ಚಿತಾಗಾರ

## ಕುಡಿಯುವ ನೀರು, ಶೌಚಾಲಯ





ಮುಳ್ಳೂರು

ಹೂವೈ ಸಾಫ್ಟ್‌ವೇರ್ ಸಂಸ್ಥೆಯ ಸಹಯೋಗದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಶಾಸಕರ ನಿಧಿ ಹಾಗೂ ಸಂಸ್ಥೆಯ ತಲಾ ನಾಲ್ಕು ಲಕ್ಷ ರೂಗಳ ವೆಚ್ಚದಲ್ಲಿ ಪಣತ್ತೂರು, ಮುಳ್ಳೂರು, ನಲ್ಲೂರಹಳ್ಳಿ ಮತ್ತು ಸೀತಾರಾಮಪಾಳ್ಯಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪೂರ್ಣಗೊಳಿಸಲಾಗಿದೆ. ಈ ಮಾದರಿಯಲ್ಲೇ ಈ ವರ್ಷದಲ್ಲಿ ಅದೂರು, ಗುಂಜೂರುಪಾಳ್ಯ, ವಿಜಯನಗರ, ಇಮ್ಮಡಿಹಳ್ಳಿ, ದೊಡ್ಡನೆಕ್ಕುಂದಿ ಕಾಲೋನಿ ಮತ್ತು ಕಾಡುಗೋಡಿಯ ಪಟಾಲಮ್ಮ ಬಡಾವಣೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಆರಂಭಗೊಳ್ಳಲಿವೆ. ಹಾಗೆಯೇ ಹತ್ತು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳನ್ನು ಈ ಸಂಸ್ಥೆಯ ಸಹಕಾರದಿಂದ ನಿರ್ಮಿಸಲಾಗಿದೆ ಹಾಗೂ 250 ಕಂಪ್ಯೂಟರ್‌ಗಳನ್ನು ಶಾಲೆಗಳಿಗೆ ವಿತರಿಸಲಾಗಿದೆ.

## ಶುದ್ಧ ಕುಡಿಯುವ ನೀರಿನ ಘಟಕಗಳು

- ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಆದ್ಯತೆಯ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ.

## ಗ್ರಾಮಗಳಿಗೆ ಕಾವೇರಿ ನೀರಿನ ಸೌಲಭ್ಯ



ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಯಾದ 110 ಗ್ರಾಮಗಳ ಪೈಕಿ ಮಹದೇವಪುರದ 31 ಗ್ರಾಮಗಳಿದ್ದು ಅವುಗಳಿಗೆ ಕಾವೇರಿ ನೀರಿನ ಸೌಲಭ್ಯ ಕಲ್ಪಿಸಲು ಕೇಂದ್ರ ನಗರಾಭಿವೃದ್ಧಿ ಸಚಿವರನ್ನು, ಸಂಸದರನ್ನು ಭೇಟಿ ಮಾಡಿ ಪ್ರಸ್ತಾವನೆಯನ್ನು ಪ್ರಥಮ ಆದ್ಯತೆಯ ಮೇಲೆ ಅನುಮೋದನೆ ಮಾಡಿಸಿ, ಸದರಿ ಗ್ರಾಮಗಳಿಗೆ ಕಾವೇರಿ ನೀರಿನ ಪೈಪ್ ಲೈನ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಹಾಲಿ ಸದರಿ ಗ್ರಾಮಗಳಿಗೆ ಕೊಳವೆ ಬಾವಿಗಳ ಮೂಲಕ ಸಮರ್ಪಕ ನೀರು ಸರಬರಾಜು ಮಾಡಲಾಗುತ್ತಿದೆ.

## ಎಲ್ಲಾ ಗ್ರಾಮಗಳಿಗೆ ಕೊಳವೆ ಬಾವಿಗಳು



ಮಹದೇವಪುರ ಕ್ಷೇತ್ರದ ಗ್ರಾಮಾಂತರ ಭಾಗದಲ್ಲಿರುವ ಎಲ್ಲಾ ಗ್ರಾಮಗಳಿಗೂ ಅಗತ್ಯ ಕೊಳವೆ ಬಾವಿಗಳನ್ನು ಕೊರೆಸಿ ಸಮರ್ಪಕ ನೀರು ಸರಬರಾಜು ಮಾಡಲಾಗುತ್ತಿದೆ.

- ಹಳೇ ಸಿ.ಎಂ.ಸಿ ವ್ಯಾಪ್ತಿಯಲ್ಲಿನ ಎಲ್ಲಾ ಪ್ರದೇಶಗಳಲ್ಲಿ ಯು.ಜಿ.ಡಿ ಮತ್ತು ಕಾವೇರಿ ನೀರಿನ ಸೌಲಭ್ಯ ಒದಗಿಸಲಾಗಿದೆ.

# ಸಾರ್ವಜನಿಕ ಸುರಕ್ಷತೆ, ಬಗೆಬಗೆ ಸೌಕರ್ಯ...

## ಶಾಂತಯುತ ಸಹಬಾಳ್ವೆಯ ಮಹದೇವಪುರ

ಬೆಂಗಳೂರು ನಗರದಲ್ಲಿ ಅಪರಾಧದ ಪ್ರಮಾಣ ಹೆಚ್ಚಿದ್ದರೂ ಮಹದೇವಪುರ ಕ್ಷೇತ್ರದಲ್ಲಿ ಅಪರಾಧ ಪ್ರಮಾಣ ಕಡಿಮೆ ಇದ್ದು ಎಲ್ಲಾ ಧರ್ಮಗಳ ಜನರು ಶಾಂತಿಯುತವಾಗಿ ಸಹಬಾಳ್ವೆ ನಡೆಸುತ್ತಿದ್ದಾರೆ. (Lowest Crime Rate).

## ಸುರಕ್ಷತೆಗೆ ಸಿ.ಸಿ ಕ್ಯಾಮರಾ



ಶಾಸಕರ ನಿಧಿ (60 ಲಕ್ಷ ರೂ.), ಸಂಸದರ ನಿಧಿ (30 ಲಕ್ಷ ರೂ.), ವಿಧಾನ ಪರಿಷತ್ ಸದಸ್ಯರಾದ ಶ್ರೀ ಲೇಹರ್ ಸಿಂಗ್ (20 ಲಕ್ಷ ರೂ.), ಶ್ರೀ ರಘುನಾಥ ಮಲ್ಕಾಪುರೆ (20 ಲಕ್ಷ ರೂ.) ರವರ ನಿಧಿಯಿಂದ ಕಾಡುಗೋಡಿ, ವರ್ತೂರು, ಮಾರತ್ತಹಳ್ಳಿ, ಹೆಚ್.ಎ.ಎಲ್, ಮಹದೇವಪುರ ಮತ್ತು ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುರಕ್ಷತಾ ದೃಷ್ಟಿಯಿಂದ ಸಿ.ಸಿ ಕ್ಯಾಮರಾ ಅಳವಡಿಸಲು ಹಣ ಬಿಡುಗಡೆ ಮಾಡಲಾಗಿದೆ.

## ನೂತನ ಆರಕ್ಷಕ ಠಾಣೆಗಳು



ವೈಟ್‌ಫೀಲ್ಡ್

ಸುರಕ್ಷತೆಯ ದೃಷ್ಟಿಯಿಂದ ಆವಲಹಳ್ಳಿ, ಮಾರತ್ತಹಳ್ಳಿ ಮತ್ತು ಬೆಳ್ಳಂದೂರುಗಳಲ್ಲಿ ನೂತನ ಅರಕ್ಷಕ ಠಾಣೆಗಳನ್ನು ಪ್ರಾರಂಭಿಸಲಾಗಿದೆ. ವೈಟ್‌ಫೀಲ್ಡ್‌ನಲ್ಲಿ ಡಿ.ಸಿ.ಪಿ ಕಛೇರಿಗೆ ನೂತನ ಕಟ್ಟಡ ಪಿ.ಪಿ.ಪಿ ಮಾದರಿಯಲ್ಲಿ ಪ್ರಾರಂಭಿಸಲಾಗಿದೆ.



ಮಾರತ್ತಹಳ್ಳಿ

## ಗ್ರಾಮಗಳಿಗೆ ನಿರಂತರ ವಿದ್ಯುತ್ ಸರಬರಾಜು

- ವಿದ್ಯುತ್ ಸಮಸ್ಯೆಯನ್ನು ನಿವಾರಿಸಲು ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಿದ್ದು, ಗ್ರಾಮಾಂತರ ಗ್ರಿಡ್‌ನ ವ್ಯಾಪ್ತಿಯಲ್ಲಿದ್ದ 13 ಗ್ರಾಮಗಳನ್ನು ನಗರ ವಿದ್ಯುತ್ ಗ್ರಿಡ್ ವ್ಯಾಪ್ತಿಗೆ ಸೇರಿಸಿ ನಿರಂತರ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಕ್ಷೇತ್ರದ ಪ್ರಮುಖ ವೃತ್ತಗಳಲ್ಲಿ ಹೈ-ಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ.

- ಬೆಳ್ಳಂದೂರು ವಾರ್ಡಿನ ಕೈಕೊಂಡರಹಳ್ಳಿಯಲ್ಲಿ ಪಿ.ಪಿ.ಪಿ ಅಡಿಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲಾಗಿದೆ.

# ಮೆಟ್ರೋ, ರೈಲು ನಿಲ್ದಾಣ; ಬಯಲು ಜಿಮ್...

## ಹೂಡಿಯಲ್ಲಿ ರೈಲ್ವೆ ನಿಲ್ದಾಣ ಕಾರ್ಯಾರಂಭ




ದೇಶದಲ್ಲೇ ಮೊದಲ ಬಾರಿಗೆ ಮಾನ್ಯ ಸಂಸದ ಶ್ರೀ ಪಿ.ಸಿ.ಮೋಹನ್‌ರವರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಿಂದ ಹೂಡಿಯಲ್ಲಿ ರೈಲ್ವೆ ನಿಲ್ದಾಣ ನಿರ್ಮಾಣವಾಗಿ ಕಾರ್ಯಾರಂಭಗೊಂಡಿದ್ದು ಸಾವಿರಾರು ಮಂದಿ ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

## ಕಾಡುಗೋಡಿಯಲ್ಲಿ ಬಯಲು ಜಿಮ್



ನ್ಯೂ ಹಾರಿಜನ್ ಕಾಲೇಜಿನ ಸಂಸ್ಥೆಯ ಸಹಕಾರದಲ್ಲಿ ಕಾಡುಗೋಡಿಯಲ್ಲಿ ಬಯಲು ಜಿಮ್ ನಿರ್ಮಿಸಲಾಗಿದ್ದು, ದಿನವೂ ಸಾವಿರಾರು ನಾಗರಿಕರು ಅದನ್ನು ಉಪಯೋಗಿಸುತ್ತಿದ್ದಾರೆ.

## ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಆರಂಭ



- ಕೇಂದ್ರ ಸರ್ಕಾರದ ಯೋಜನೆಯಡಿ ಎಲ್ಲಾ ಮನೆಗಳಿಗೆ ಗ್ಯಾಸ್ ಸಂಪರ್ಕ ನೀಡಲು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಚಾಲನೆ

## ಪ್ರಗತಿಪಥದಲ್ಲಿ ಮೆಟ್ರೋ...

- ಬೈಯ್ಯಪ್ಪನಹಳ್ಳಿಯಿಂದ ಐ.ಟಿ.ಪಿ.ಎಲ್ ಮಾರ್ಗ ಕಾಡುಗೋಡಿ ವರೆಗಿನ 2ನೇ ಹಂತದ ಮೆಟ್ರೋ ಕಾಮಗಾರಿಯು ಪ್ರಗತಿಯಲ್ಲಿದೆ ಹಾಗೂ ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೋ ಸೇವೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.




ಹೂಡಿಯಲ್ಲಿ ನಮ್ಮ ಮೆಟ್ರೋ

# ಮಕ್ಕಳಿಗೆ ವಿಮೆ, ಬೈಸಿಕಲ್; ನೆರೆಗೆ ಪರಿಹಾರ...

## ಆರೋಗ್ಯ ವಿಮೆ




ದೊಡ್ಡನೆಕ್ಕುಂದಿ ವಾರ್ಡಿನ ಸರ್ಕಾರಿ ಶಾಲೆಯ ಸುಮಾರು 953 ಶಾಲಾ ಮಕ್ಕಳಿಗೆ ಹಾಗೂ ಅವರ ಪೋಷಕರಿಗೆ ಆರೋಗ್ಯ ವಿಮೆ ಮಾಡಿಸಲಾಯಿತು.

## ನೆರೆ ಪರಿಹಾರ



ಬೆಳ್ಳಂದೂರು ವಾರ್ಡಿನ ಬಿ.ಆರ್.ಅಂಬೇಡ್ಕರ್ ನಗರದಲ್ಲಿ ಮಳೆಯಿಂದ ಹಾನಿಗೊಳಗಾದ ಕುಟುಂಬಗಳಿಗೆ ಪರಿಹಾರದ ಚೆಕ್ ವಿತರಣೆ ಮಾಡಲಾಯಿತು.

## ಸೈಕಲ್ ವಿತರಣೆ



ಕನ್ನಮಂಗಲ ಸರ್ಕಾರಿ ಶಾಲೆಯ ಮಕ್ಕಳಿಗೆ ಸೈಕಲ್ ವಿತರಣೆ

## ಶುದ್ಧ ಕುಡಿಯುವ ನೀರು



ಕಾಡುಗೋಡಿ ವಾರ್ಡಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

## ಸಿಗ್ನಲ್ ಫ್ರೀ ಕಾರಿಡಾರ್...

- ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. ಹೂಡಿ ಜಂಕ್ಷನ್, ಕುಂದಲಹಳ್ಳಿ ಜಂಕ್ಷನ್ ಮತ್ತು ಹೋಪ್ ಫಾರಂ ಅಂಡರ್ ಪಾಸ್ ಕಾಮಗಾರಿಗಳು ಪ್ರಾರಂಭವಾಗಬೇಕಿದ್ದು, ಇದಕ್ಕಾಗಿ ಜಮೀನಿನ ಮಾಲೀಕರ ಮನವೊಲಿಸಿ ಪರಿಹಾರ ನೀಡಿ ಜಮೀನು ಪಡೆಯಲಾಗುತ್ತಿದೆ. ಜೊತೆಗೇ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

## ಗರಿಷ್ಠ ಪ್ರಮಾಣದಲ್ಲಿ ರಸ್ತೆಗಳ ಅಭಿವೃದ್ಧಿ

- ಬಿ.ಬಿ.ಎಂ.ಪಿ, ಬಿ.ಡಿ.ಎ, ಅಸ್ಸೈಡ್, ಪಿ.ಡಬ್ಲ್ಯೂ.ಡಿ, ಸ್ವಚ್ಛ ಭಾರತ್ ಮತ್ತು ಜಿಲ್ಲಾ ಪಂಚಾಯತ್ ಅನುದಾನದಡಿಯಲ್ಲಿ ಕ್ಷೇತ್ರದಲ್ಲಿನ ಬಹುತೇಕ ಎಲ್ಲಾ ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಮತ್ತು ಪ್ರಮುಖ ಇಂಟರ್‌ಲಿಂಕ್ ರಸ್ತೆಗಳ ಅಭಿವೃದ್ಧಿ ಮಾಡಲಾಗಿದೆ. ಇನ್ನುಳಿದ ಪ್ರಮುಖ ರಸ್ತೆಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

# ಅಡುಗೆ ಅನಿಲ, ಆರೋಗ್ಯ, ಹಕ್ಕುಪತ್ರ, ಆಶ್ರಯ...

## ಅಡುಗೆ ಅನಿಲ ವಿತರಣೆ



ಸೂಲಿಕುಂಟೆ ಗ್ರಾಮದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರ ಮಹತ್ವಾಕಾಂಕ್ಷೆಯ ಉಜ್ವಲ ಯೋಜನೆಯಡಿ ಗ್ಯಾಸ್ ಸಂಪರ್ಕ ವಿತರಣೆ.

## 'ಆಶ್ರಯ'ಕ್ಕೆ 43 ಎಕರೆ

- ಹಾಡೋಸಿದ್ದಾಪುರ ಗ್ರಾಮದಲ್ಲಿ 9 ಎಕರೆ 21 ಗುಂಟೆ, ಸೂಲಿಕುಂಟೆ ಗ್ರಾಮದಲ್ಲಿ 10 ಎಕರೆ, ಕಣ್ಣೂರು ಗ್ರಾಮದಲ್ಲಿ 9 ಎಕರೆ 20 ಗುಂಟೆ, ಕೊಡತಿಯಲ್ಲಿ 5 ಎಕರೆ, ಮಂಡೂರು ಗ್ರಾಮದಲ್ಲಿ 2 ಎಕರೆ 16 ಗುಂಟೆ, ಬಯ್ಯಪ್ಪನಹಳ್ಳಿ ಗ್ರಾಮದಲ್ಲಿ 5 ಎಕರೆ, ಎನ್ ಜಿ ಗೊಲ್ಲಹಳ್ಳಿಯಲ್ಲಿ 34 ಗುಂಟೆ ಜಮೀನು – ಹೀಗೆ 43.11 ಎಕರೆ ಪ್ರದೇಶವನ್ನು 'ಆಶ್ರಯ ಯೋಜನೆ'ಯಡಿ ಬಡವರಿಗೆ ವಸತಿ, ನಿವೇಶನ ಹಂಚಲು / ವಸತಿ ಸಮುಚ್ಚಯ ನಿರ್ಮಿಸಲು ಕಾದಿರಿಸಲಾಗಿದೆ.

## ಆರೋಗ್ಯ ತಪಾಸಣಾ ಶಿಬಿರ



ವರ್ತೂರು ವಾರ್ಡಿನ ಬಳಗೆರೆ ರಸ್ತೆಯ ಶೋಭಾ ಡ್ರೀಮ್ ಎಕರ್ಸ್ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಲರ ರೋಂಗನ್ನು ತಡೆಯಲು ಮುಂಜಾಗರೂಕತೆಯ ಕ್ರಮವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ.

## ವಸತಿ ಹಕ್ಕುಪತ್ರ ವಿತರಣೆ, ಆಶ್ರಯ ನಿವಾಸಗಳಿಗೆ ೪೦ ಎಕರೆ ಮೀಸಲು

- ದೇವರಬಿಸನಹಳ್ಳಿ, ಕೆಂಪಾಪುರ ಕಾಲೋನಿ, ಗೊರವಿಗೆರೆ, ಕನ್ನಮಂಗಲ ದಿನ್ನೆ, ಹುಸ್ಕೂರು ಕೋಡಿ, ಬಸವಣ್ಣ ನಗರ, ಕಾವೇರಿ ನಗರ, ವಿಜಯನಗರ, ಗಾಂಧೀಪುರ ಮತ್ತಿತರೆ ಗ್ರಾಮಗಳಲ್ಲಿ ಸರ್ಕಾರಿ ಜಾಗದಲ್ಲಿ 30 ವರ್ಷಗಳಿಂದಲೂ ಮನೆ ಕಟ್ಟಿಕೊಂಡಿದ್ದವರಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಇನ್ನುಳಿದ 70ಕ್ಕೂ ಹೆಚ್ಚು ಸರ್ಕಾರಿ ಪ್ರದೇಶಗಳ ಜನತೆಗೆ ಹಕ್ಕುಪತ್ರಗಳನ್ನು ನೀಡುವ ಕಾರ್ಯವು ಪ್ರಗತಿಯಲ್ಲಿದೆ.





# ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಹೋರಾಟ...




## ನೀವು ಕೊಟ್ಟ ತೆರಿಗೆಗೆ ನ್ಯಾಯ ಒದಗಿಸದ ಕಾಂಗ್ರೆಸ್ ಸರ್ಕಾರ

ಈಗಿರುವ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕುತ್ತಿರುವ ಮಹದೇವಪುರ ಕ್ಷೇತ್ರದ ಬಗ್ಗೆ ಮಲತಾಯಿ ಧೋರಣೆ ತಳೆದಿದೆ. ರಾಜ್ಯ ಸರ್ಕಾರವು ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಉದ್ದೇಶಪೂರ್ವಕವಾಗಿ ಕಡೆಗಾಣಿಸಿದೆ. ಹಿಂದಿದ್ದ ಬಿ.ಜೆ.ಪಿ ಸರ್ಕಾರ ಮಹದೇವಪುರಕ್ಕೆ ಮಂಜೂರು ಮಾಡಿದ್ದ ಅಭಿವೃದ್ಧಿ ಕಾರ್ಯಗಳನ್ನು ಈಗಿನ ಕಾಂಗ್ರೆಸ್ ಸರ್ಕಾರ ಈಡೇರಿಸದೇ ಮಹದೇವಪುರದ ಜನತೆಗೆ ಭಾರೀ ಅನ್ಯಾಯ ಎಸಗಿದೆ. ಉದಾಹರಣೆಗೆ ಈ ಕೆಳಗಿನ ಕಾಮಗಾರಿಗಳು ಹಿಂದಿನ ಬಿ.ಜೆ.ಪಿ ಸರ್ಕಾರದಲ್ಲಿ ಮಂಜೂರಾಗಿದ್ದರೂ ಕಾಂಗ್ರೆಸ್ ಸರ್ಕಾರದ ದುರುದ್ದೇಶದಿಂದ ಇನ್ನೂ ಆರಂಭವಾಗದೆ ಕುಳಿತಿವೆ.

### ಹೆಚ್ಚು ತೆರಿಗೆ ಪಾವತಿಯಾದರೂ,ಅತ್ಯಂತ ಕಡಿಮೆ ಅನುದಾನ

- ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳ ಪೈಕಿ ಮಹದೇವಪುರ ವಿಧಾನಸಭಾ ಕ್ಷೇತ್ರವು ಬಿ.ಬಿ.ಎಂ.ಪಿ ಗೆ ಅತ್ಯಂತ ಹೆಚ್ಚಿನ ತೆರಿಗೆಯನ್ನು ಪಾವತಿಸುತ್ತಿದೆ. 2013–14ರ ಸಾಲಿನಿಂದ ಇದುವರೆಗೂ ಮಹದೇವಪುರ ಕ್ಷೇತ್ರದಿಂದ ಬಿಬಿಎಂಪಿಗೆ ಸುಮಾರು ರೂ. 1750 ಕೋಟಿ ಸಂದಾಯವಾಗಿದೆ. ಇದಕ್ಕಿಂತಲೂ ಹೆಚ್ಚು ಪ್ರಮಾಣದ ತೆರಿಗೆಗಳನ್ನು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ತುಂಬಲಾಗಿದೆ. ಆದರೆ ಪ್ರತಿಯಾಗಿ ಮಹದೇವಪುರಕ್ಕೆ ನೀಡಿರುವ ಅನುದಾನವು ಅತ್ಯಂತ ಕಡಿಮೆ. ಇದರ ಫಲವಾಗಿ ನೂರಾರು ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿವೆ. ಈ ಅನುದಾನ ಹಂಚಿಕೆಯಲ್ಲಿನ ತಾರತಮ್ಯವನ್ನು ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ನಡೆಸಲಾಗಿದೆ. ಆದರೆ ಇದೇ ಅವಧಿಯಲ್ಲಿ ನೆರೆಹೊರೆಯ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅಪಾರ ಪ್ರಮಾಣದ ನಿಧಿ ಬಿಡುಗಡೆ ಮಾಡಲಾಗಿದೆ.

### ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿಗೆ ಅಡ್ಡಗಾಲು

- ಬೈಯ್ಯಪ್ಪನಹಳ್ಳಿಯಿಂದ ಚನ್ನಸಂದ್ರ ರಾಜ್ಯ ಹೆದ್ದಾರಿ 208ರವರೆಗೆ ಹಾಗೂ ಹಳೇ ವಿಮಾನ ನಿಲ್ದಾಣದಿಂದ ರಾಷ್ಟ್ರೀಯ ಹೆದ್ದಾರಿ 4ರವರೆಗಿನ ಎರಡು ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಮಂಜೂರಾಗಿದ್ದು ಈಗಿನ ಸನ್ಮಾನ್ಯ ಮುಖ್ಯಮಂತ್ರಿಯವರು ಕಾಮಗಾರಿಗೆ ಚಾಲನೆ ನೀಡಿ ನಾಲ್ಕು ವರ್ಷ ಕಳೆದಿದ್ದರೂ ಕಾಮಗಾರಿ ವಿಳಂಬವಾಗಿ ನಡೆಯುತ್ತಿದೆ.

### ಕಸ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾದ ಸರ್ಕಾರ; ತಪ್ಪದ ಬವಣೆ

- ಮಂಡೂರಿನಲ್ಲಿ ಕಸ ಹಾಕುತ್ತಿದ್ದುದನ್ನು ಹಲವಾರು ಪ್ರತಿಭಟನೆಗಳ ನಂತರ ಸ್ಥಗಿತಗೊಳಿಸಿದ್ದು ಆಗ ಸರ್ಕಾರವು ಒಂದು ವರ್ಷದೊಳಗೆ ಪೂರ್ಣ ತ್ಯಾಜ್ಯವನ್ನು ತೆರವುಗೊಳಿಸುವುದಾಗಿ ತಿಳಿಸಿ ನಾಲ್ಕು ವರ್ಷ ಕಳೆದರೂ ಯಾವುದೇ ಕ್ರಮ ಜರುಗಿಸಿಲ್ಲ.
- ಮಿಟ್ಟಗಾನಹಳ್ಳಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸ ಸುರಿಯುತ್ತಿರುವುದನ್ನು ನಿಲ್ಲಿಸಲು ಹಲವಾರು ಪ್ರತಿಭಟನೆಗಳ ಬಳಿಕ 3 ತಿಂಗಳು

## ಕ್ಷೇತ್ರದ ಅಭಿವೃದ್ಧಿಗೆ ನಿರಂತರ ಹೋರಾಟ...

ಕಾಲಾವಕಾಶ ಕೇಳಿ ಪಡೆಯಲಾಗಿದ್ದರೂ ಅದು ಇನ್ನೂ ನಿಂತಿಲ್ಲ. ಕ್ಷೇತ್ರದಲ್ಲಿನ ಕಸ ವಿಲೇವಾರಿ ಮಾಡಲು ಸರ್ಕಾರಿ ಭೂಮಿಯನ್ನು ಕೇಳಿದ್ದರೂ ಸರ್ಕಾರವು ಇನ್ನೂ ಕೊಟ್ಟಿಲ್ಲ.



ಮಿಟ್ಟಗಾನಹಳ್ಳಿ, ಬೆಳ್ಳಹಳ್ಳಿ ಗ್ರಾಮದ ಕಲ್ಲುಕೋರಿಯಲ್ಲಿ ಬಿ.ಬಿ.ಎಂ.ಪಿ ಕಸ ವಿರುದ್ಧ ಪ್ರತಿಭಟನೆ

## ಮಲಿನ ಕೆರೆಗಳ ಅಭಿವೃದ್ಧಿ ನಿರ್ಲಕ್ಷ್ಯ, ನ್ಯಾಯಾಲಯ ಆದೇಶ ತಿರಸ್ಕಾರ

- ವರ್ತೂರು ಮತ್ತು ಬೆಳ್ಳಂದೂರು ಕೆರೆಗಳ ಅಭಿವೃದ್ಧಿಗೆ ತ್ವರಿತ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ(ಎನ್‌ಜಿಟಿ)ವೇ ಆದೇಶ ನೀಡಿದ್ದರೂ ರಾಜ್ಯ ಸರ್ಕಾರವು ಈವರೆಗೂ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಅಲ್ಲದೇ ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನೂ ಬಳಸಿಕೊಂಡಿಲ್ಲ.
- ರಾಂಪುರ ಕೆರೆಯೂ ಬೆಳ್ಳಂದೂರು ಕೆರೆಯ ಹಾಗೆಯೇ ಮಲಿನಗೊಳ್ಳುತ್ತಿದೆ. ಆದರೆ ರಾಜ್ಯ ಸರ್ಕಾರವು ಮಾತ್ರ ಈ ಕೆರೆಯನ್ನು ಸುಧಾರಿಸಲು ಯಾವುದೇ ಅಭಿವೃದ್ಧಿ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಮಹದೇವಪುರ ಕ್ಷೇತ್ರದ ಇನ್ನೂ ಹಲವು ಕೆರೆಗಳನ್ನು ಅಭಿವೃದ್ಧಿಪಡಿಸಲು ಒತ್ತಡ ಹಾಕುತ್ತಿದ್ದರೂ ರಾಜ್ಯ ಸರ್ಕಾರವು ಮಾತ್ರ ನಿರ್ಲಕ್ಷ್ಯ ತೋರಿದೆ; ಕೆಲವೇ ಕೆರೆಗಳ ಅಭಿವೃದ್ಧಿ ಮಾಡುತ್ತ ಉಳಿದವುಗಳನ್ನು ಮರೆತಿದೆ.



ಬೆಳ್ಳಂದೂರು ಕೆರೆ ಮಾಲಿನ್ಯ ವಿರುದ್ಧ ಭಾರೀ ಪ್ರತಿಭಟನೆ

## ನೆನೆಗುದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು

- ಬಿದರಹಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದ್ದು, ಇದುವರೆಗೂ ಕಾಮಗಾರಿ ಪ್ರಾರಂಭವಾಗಿಲ್ಲ; ಕಂದಾಯ ಇಲಾಖೆಯವರು ಜಮೀನು ನೀಡಿಲ್ಲ. ಕೊಡತಿ ಮತ್ತು ಹಾಲನಾಯಕನಹಳ್ಳಿ ಮತ್ತು ಮಂಡೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಿದ್ಧವಾಗಿದ್ದರೂ ಅಧಿಕೃತವಾಗಿ ಉದ್ಘಾಟನೆಯಾಗಿಲ್ಲ; ಹೀಗಿದ್ದೂ ಸಾರ್ವಜನಿಕ ಹಿತ ಮತ್ತು ಕಟ್ಟಡದ ಸದ್ಬಳಕೆಗಾಗಿ ನಾನೇ ಖುದ್ದು ನಿಂತು ಸೇವೆ ಆರಂಭಿಸಿದ್ದೇನೆ. ಇನ್ನು ಮಾರತ್ತಹಳ್ಳಿ ಮತ್ತು ಕಣ್ಣೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಿದ್ಧವಾಗಿವೆ.

## ಆಸ್ಪತ್ರೆಗೆ ಜಮೀನು ನೀಡಲು ನಿರುತ್ಸಾಹ

- ಸಿದ್ದಾಪುರದಲ್ಲಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಲು ಅನುದಾನ ಬಿಡುಗಡೆಯಾಗಿದೆ. ಬಿ.ಎಂ.ಟಿ.ಸಿ ವತಿಯಿಂದ ಆರೋಗ್ಯ ಇಲಾಖೆಗೆ ಜಮೀನು ಹಸ್ತಾಂತರ ಮಾಡುವಲ್ಲಿ ಸರ್ಕಾರ ನಿರುತ್ಸಾಹ ತೋರಿಸುತ್ತಿದೆ.

## ಮೀಸಲಿಟ್ಟ ಒತ್ತುವರಿ ಭೂಮಿ ಬಳಕೆಯಿಲ್ಲ; ಒತ್ತುವರಿಗೆ ತಡೆಯಿಲ್ಲ!

ನಾನು ಶಾಸಕನಾದ ಮೊದಲ ಅವಧಿಯಲ್ಲಿಯೇ 270ಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ಮುಕ್ತಗೊಳಿಸಿ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಡಲಾಗಿತ್ತು. ಅವುಗಳಲ್ಲಿ ಪ್ರಮುಖವಾಗಿ

- ಗುಂಜೂರು ಗ್ರಾಮದ ಸ.ನಂ. 104ರಲ್ಲಿ 27.04 ಎಕರೆ ಜಮೀನನ್ನು ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿತ್ತು. ಆದರೆ ರಾಜ್ಯ ಸರ್ಕಾರವು ಈ ಕ್ರೀಡಾಂಗಣ ಅಭಿವೃದ್ಧಿಗೆ ಯಾವುದೇ ಅನುದಾನವನ್ನೂ ನೀಡಿಲ್ಲ. ಇದರಿಂದ ಕ್ಷೇತ್ರವು ಜಾಗತಿಕ ಮಹತ್ವದ ಕ್ರೀಡಾ ತಾಣ ರೂಪಿಸುವಲ್ಲಿ ಹಿಂದೆ ಬಿದ್ದಿದೆ.
- ದೊಡ್ಡಕನ್ನಲ್ಲಿ ಗ್ರಾಮದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ 2.0 ಎಕರೆ ಜಮೀನನ್ನು, ವೇಮನ ಅಂತಾರಾಷ್ಟ್ರೀಯ ಸಭಾಂಗಣ ನಿರ್ಮಾಣಕ್ಕಾಗಿ 4 ಎಕರೆಗಳನ್ನು ಕಾಯ್ದಿರಿಸಲಾಗಿತ್ತು. ಆದರೆ ರಾಜ್ಯ ಸರ್ಕಾರವು ಇವಾವುದಕ್ಕೂ ಅನುದಾನ ನೀಡಿಲ್ಲ.
- ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುಂಜೂರು ಗ್ರಾಮದಲ್ಲಿ ಬಿಡಿಎ ವತಿಯಿಂದ ಮನೆಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿತ್ತು; ಕೊಡತಿ ಗ್ರಾಮದಲ್ಲಿ 5 ಎಕರೆ ಪ್ರದೇಶದಲ್ಲಿ ಭಾಗ್ಯ-ಸಂಪದ-ಯಶಸ್ಸು (ಬಿಎಸ್‌ವೈ) ಯೋಜನೆಯಿಂದ 500 ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿತ್ತು. ಈಗಿನ ಸರ್ಕಾರದ ನಿರ್ಲಕ್ಷದಿಂದಾಗಿ ಈ ಕಾಮಗಾರಿಯು ಇನ್ನೂ ಪೂರ್ಣಗೊಂಡಿಲ್ಲ.
- ಮಹದೇವಪುರದಲ್ಲಿ ಇನ್ನೂ ಹಲವು ರಾಜಕಾಲುವೆಗಳು, ಸರ್ಕಾರಿ ಜಮೀನು ಪ್ರದೇಶಗಳು ಮತ್ತು ಕೆರೆಗಳು ಒತ್ತುವರಿಯಾಗಿದ್ದು ಇವುಗಳ ಬಗ್ಗೆ ಸರ್ವೆ ನಡೆಸಿ ಒತ್ತುವರಿ ತೆರವುಗೊಳಿಸಲು ಒತ್ತಾಯಿಸಿದ್ದರೂ ರಾಜ್ಯ ಸರ್ಕಾರವು ಸಂಪೂರ್ಣ ನಿರ್ಲಕ್ಷ್ಯ ತೋರಿದೆ.

## ರಸ್ತೆ, ಓವರ್/ಅಂಡರ್ ಬ್ರಿಡ್ಜ್ ನಿರ್ಮಾಣ, ಹೊಸ ಮಾರುಕಟ್ಟೆಗೆ ಅಡ್ಡಗಾಲು

- ಪೂರ್ವ ವಿಮಾನ ನಿಲ್ದಾಣ ಸಂಪರ್ಕ ರಸ್ತೆ (ಈಸ್ಟರ್ನ್ ಏರ್‌ಪೋರ್ಟ್ ಅಪ್ರೋಚ್ ರೋಡ್) ಕ್ಷೇತ್ರದ ಒಂದು ಪ್ರಮುಖ ಸಂಪರ್ಕ ರಸ್ತೆಯಾಗಿ ಈಗಾಗಲೇ ಜನಬಳಕೆಗೆ ಮುಕ್ತವಾಗಬೇಕಿತ್ತು. ರಾಜ್ಯ ಸರ್ಕಾರವು ಈ ಮಹತ್ವದ ಕಾಮಗಾರಿಯ ಬಗ್ಗೆ ಸಂಪೂರ್ಣ ನಿರಾಸಕ್ತಿ ತೋರುತ್ತಿದೆ.
- ಚಿನ್ನಪ್ಪನಹಳ್ಳಿ, ಮುನ್ನೇಕೊಳಾಲು, ಕಾರ್ಮಲರಾಂ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ತಡೆಯಲು ರೈಲ್ವೆ ROB/RUB (ರೇಲ್ವೆ ಓವರ್‌ಬ್ರಿಡ್ಜ್ ಮತ್ತು ರೈಲ್ವೆ ಅಂಡರ್‌ಬ್ರಿಡ್ಜ್) ನಿರ್ಮಿಸಲು ಯಾವುದೇ ಅನುದಾನವನ್ನೂ ರಾಜ್ಯ ಸರ್ಕಾರ, ಬಿಬಿಎಂಪಿ ನೀಡಿಲ್ಲ. ಪಣತ್ತೂರು ಹಾಗೂ ದೊಡ್ಡನೆಕ್ಕುಂದಿಯಲ್ಲಿ ಹೆಚ್ಚುವರಿ ವೆಂಟ್ ಅಳವಡಿಸಲು ಕೇಳಿದ್ದರೂ ಕ್ರಮ ಕೈಗೊಂಡಿಲ್ಲ.
- ವರ್ತೂರು ಮಾರುಕಟ್ಟೆಯನ್ನು ಬೇರೆ ಪ್ರದೇಶಕ್ಕೆ ವರ್ಗಾಯಿಸಲು ಮತ್ತು ಈಗಿರುವ ಸ್ಥಳದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ರಾಜ್ಯ ಸರ್ಕಾರವು ಈ ಕಾರ್ಯಕ್ಕಾಗಿ ಜಮೀನನ್ನೇ ಹಸ್ತಾಂತರ ಮಾಡದೆ ಸಾರ್ವಜನಿಕ ಬೇಜವಾಬ್ದಾರಿ ಪ್ರದರ್ಶಿಸಿದೆ.

## ಕಾಲೇಜು ಕಟ್ಟಡ, ಅಂತಾರಾಷ್ಟ್ರೀಯ ಕ್ರೀಡಾಂಗಣದ ಬಗ್ಗೆ ನಿರಾಸಕ್ತಿ!

- ಕಾಡುಗೋಡಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ 2 ಎಕರೆ ಜಮೀನು ಮಂಜೂರಾಗಿತ್ತು; ಈ ಕಾಮಗಾರಿಗೂ ಸರ್ಕಾರವು ಯಾವುದೇ ಅನುದಾನ ನೀಡಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಕಳೆದ ನಾಲ್ಕು ವರ್ಷಗಳಿಂದ ಪರದಾಡುವಂತಾಗಿದೆ.
- ವರ್ತೂರು ಮತ್ತು ಹೂಡಿ ಆಟದ ಮೈದಾನಗಳನ್ನು ಅಭಿವೃದ್ಧಿ ಪಡಿಸಲು ಭಾರೀ ಒತ್ತಡ ಹಾಕಿದರೂ ಸರ್ಕಾರವು ಈ ಕಾರ್ಯದ ಬಗ್ಗೆ ಆಸಕ್ತಿಯನ್ನೇ ಪ್ರದರ್ಶಿಸಿಲ್ಲ.
- **ಉದ್ಘಾಟನೆ ರದ್ದು:** ಇಮ್ಮಡಿಹಳ್ಳಿ ಪಾಲಿಟೆಕ್ನಿಕ್ ಹಾಗೂ ವರ್ತೂರು ಪ್ರಥಮದರ್ಜೆ ಕಾಲೇಜು ಸಿದ್ಧವಾಗಿ ಉದ್ಘಾಟನೆಯ ಆಹ್ವಾನ ಪತ್ರವನ್ನು ಮುದ್ರಿಸಿದ ಮೇಲೆ ಕಾರ್ಯಕ್ರಮವನ್ನು ರಾಜ್ಯಸರ್ಕಾರದ ಪಕ್ಷಪಾತದಿಂದಾಗಿ ರದ್ದಾಯಿತು. ಕಟ್ಟಡದ ಸದ್ಬಳಕೆಗಾಗಿ ಇವುಗಳ ಕಾರ್ಯಾಚರಣೆ ಆರಂಭಿಸಿದ್ದೇನೆ. ಮಂಡೂರು ಬಸ್ ಡಿಪೋದ ಕಥೆಯೂ ಹೀಗೆಯೇ ಇದೆ. ಅಲ್ಲೂ ಉದ್ಘಾಟನೆಯಿಲ್ಲದೆ ಜನಸೇವೆ ಆರಂಭವಾಗಿದೆ.

## ಡಿಜಿಟಲ್ ಗ್ರಂಥಾಲಯಕ್ಕೆ ಬಾರದ ಅನುದಾನ

- ತೂಬರಹಳ್ಳಿಯಲ್ಲಿ ಡಿಜಿಟಲ್ ಗ್ರಂಥಾಲಯ ಕಟ್ಟಡ ಪೂರ್ಣಗೊಂಡಿದೆ; ಆದರೆ ಗ್ರಂಥಾಲಯ ಆರಂಭಿಸಲು ಅನುದಾನ ಬಿಡುಗಡೆಯಲ್ಲಿ ವಿಳಂಬವಾಗಿದೆ.

## ಕಾಂಗ್ರೆಸ್ ಹೇಳೋದು ಸಾಮಾಜಿಕ ನ್ಯಾಯ, ಮಾಡಿದ್ದು ಬರೀ ಅನ್ಯಾಯ


ಪ್ರಗತಿಯಲ್ಲಿರುವ ಮಾರತ್ತಹಳ್ಳಿ ಕೊಳೇಗೇರಿ ವಸತಿ ಸಮುಚ್ಚಯ

- ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಾಲನಿಗಳ ಅಭಿವೃದ್ಧಿಗೆ ಅನುದಾನ ನೀಡುವುದನ್ನೇ ರಾಜ್ಯ ಸರ್ಕಾರವು ನಿಲ್ಲಿಸಿ ಸಾಮಾಜಿಕ ನ್ಯಾಯ ಬಯಸಿದ ಸಾವಿರಾರು ಕುಟುಂಬಗಳಿಗೆ ಅನ್ಯಾಯ ಎಸಗಿದೆ.
- ಸಾದರಮಂಗಲ, ವರ್ತೂರು ಮತ್ತು ಚನ್ನಸಂದ್ರದಲ್ಲಿ ಹಿಂದಿನ ನಮ್ಮ ಸರ್ಕಾರ ಕೊಳೇಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ವಸತಿ ಸಮುಚ್ಚಯ ನಿರ್ಮಿಸಿ ಫಲಾನುಭವಿಗಳಿಗೆ ಹಂಚಲಾಗಿದೆ. ಮಾರತ್ತಹಳ್ಳಿ ಹಾಗೂ ಸೂಲಿಕುಂಟೆಯಲ್ಲಿ ವಸತಿ ಸಮುಚ್ಚಯ ನಿರ್ಮಿಸಲು ಕರ್ನಾಟಕ ಕೊಳೇಗೇರಿ ಅಭಿವೃದ್ಧಿ ಮಂಡಳಿಗೆ ಜಮೀನು ಹಸ್ತಾಂತರ ಮಾಡಿ ನಿರ್ಮಾಣವಾದರೂ ಸ್ಥಳೀಯರಿಗೆ ಹಂಚಿಕೆ ಆಗಿಲ್ಲ.

## ಭಾರೀ ಶ್ರಮದ ನಂತರ ಗ್ರಾಮಗಳಿಗೆ ನೀರು ಸರಬರಾಜು

- ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಯಾದ 110 ಗ್ರಾಮಗಳ ಪೈಕಿ ಮಹದೇವಪುರದ 31 ಗ್ರಾಮಗಳಿದ್ದು ಅವುಗಳಿಗೆ ಕಾವೇರಿ ನೀರಿನ ಸೌಲಭ್ಯ ಕಲ್ಪಿಸಲು ಕೇಂದ್ರ ನಗರಾಭಿವೃದ್ಧಿ ಸಚಿವರನ್ನು, ಮಾನ್ಯ ಸಂಸದರೊಂದಿಗೆ ಭೇಟಿ ಮಾಡಿ ಪ್ರಸ್ತಾವನೆಯನ್ನು ಪ್ರಥಮ ಆದ್ಯತೆಯ ಮೇಲೆ ಅನುಮೋದನೆ ಮಾಡಿಸಿಕೊಂಡು ಬಂದಿದ್ದೇವೆ. ಇದರಿಂದ ಈಗಷ್ಟೆ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಆರಂಭವಾಗಿದೆ.

## ಕೇಂದ್ರ ಸರ್ಕಾರದ ಬೆಂಬಲ, ಖಾಸಗಿ ಸಂಸ್ಥೆಗಳ ನೆರವಿನಿಂದ ಅಭಿವೃದ್ಧಿ ಕಾರ್ಯ

ರಾಜ್ಯ ಸರ್ಕಾರದ ನಿರ್ಲಕ್ಷ್ಯದ ನಡುವೆಯೂ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರದ ಬಿ.ಜೆ.ಪಿ ಸರ್ಕಾರದ ಸಹಾಯ, ಹಲವಾರು ಖಾಸಗಿ ಉದ್ಯಮಗಳ, ಸಂಸ್ಥೆಗಳ ನೆರವಿನಿಂದ ಹಾಗೂ ನನ್ನ ದೃಢಸಂಕಲ್ಪದ ಶಕ್ತಿಯಿಂದ ಮಹದೇವಪುರದಲ್ಲಿ ಅಭಿವೃದ್ಧಿ ಕಾರ್ಯಗಳು ಸತತವಾಗಿ ನಡೆಯುತ್ತಿವೆ. ಮಹದೇವಪುರ ಕ್ಷೇತ್ರದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ನೆರವಿನೊಂದಿಗೆ, ಸ್ಥಳೀಯ ಉದ್ದಿಮೆಗಳ ಸಹಕಾರದೊಂದಿಗೆ ಅವಿರತವಾಗಿ ದುಡಿಯುತ್ತಿದ್ದೇನೆ ಎಂಬ ಸಮಾಧಾನ ನನಗಿದೆ. ಇದಲ್ಲದೆ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಹಲವಾರು ಜನಪರ ಯೋಜನೆಗಳು ನಮ್ಮ ಮಹದೇವಪುರ ಕ್ಷೇತ್ರವನ್ನು ತಲುಪಿ ನಾಗರಿಕರಿಗೆ ಅತ್ಯಂತ ಅನುಕೂಲಕರವಾಗಿವೆ.

**ಸಚಿವನಾಗಿ ಜನಸೇವೆ, ಸಂಘಟಕನಾಗಿ ಪಕ್ಷದ ಕಾರ್ಯ, ಶಾಸಕನಾಗಿ ಕ್ಷೇತ್ರದ ಅಭ್ಯುದಯ**

2008–13ರ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾನು ಉನ್ನತ ಶಿಕ್ಷಣ ಸಚಿವನಾಗಿ ಮತ್ತು ಆರೋಗ್ಯ ಸಚಿವನಾಗಿ ರಾಜ್ಯದ ಆಡಳಿತದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದೆ. ನನ್ನ ಕಾಲಾವಧಿಯಲ್ಲಿ ಶಿಕ್ಷಣ – ಆರೋಗ್ಯ ರಂಗದಲ್ಲಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದ್ದೇನೆ ಎಂಬ ತೃಪ್ತಿಯಿದೆ.

ಇದಲ್ಲದೆ ಕಳೆದ ಎರಡು ದಶಕಗಳಿಂದಲೂ ಭಾರತೀಯ ಜನತಾ ಪಾರ್ಟಿಯ ಸಂಘಟಕ – ಕಾರ್ಯಕರ್ತನಾಗಿರುವ ನಾನು ಇದೀಗ ಎಂಟನೆಯ ಬಾರಿಗೆ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಹೀಗೆ ರಾಜ್ಯದ ಆಡಳಿತ, ಪಕ್ಷದ ಸಂಘಟನೆ – ಇವುಗಳ ಮಧ್ಯೆಯೂ ಮಹದೇವಪುರ ವಿಧಾನಸಭಾ ಕ್ಷೇತ್ರ ಅಭಿವೃದ್ಧಿ ಕಾರ್ಯಗಳನ್ನು ಎಡಬಿಡದೆ ಮುನ್ನಡೆಸಿಕೊಂಡು ಬಂದಿದ್ದೇನೆ. ಸಮಾಜಕಾಯಕದಲ್ಲೇ ನನಗೆ ಅತ್ಯಂತ ಸಮಾಧಾನವಿದೆ; ಜನಸೇವೆಯಲ್ಲೇ ನನ್ನ ಸಂತೋಷವಿದೆ.

## ಬರೆಯಿರಿ ನಿಮ್ಮದೇ ನೀಲನಕಾಶೆ! ಮಹದೇವಪುರ ಅಭ್ಯುದಯದ ಭರವಸೆ!!

ಮುಂದಿನ ಐದು ವರ್ಷಗಳಲ್ಲಿ ಮಹದೇವಪುರದ ಬಗೆಗಿನ ನಿಮ್ಮ ಕನಸೇನು? ಮಹದೇವಪುರದ ಅಭಿವೃದ್ಧಿಯ ಮುನ್ನೋಟ ಯಾವ ರೀತಿಯಾಗಿರಬೇಕು, ಬೆಂಗಳೂರಿನ ಅಭ್ಯುದಯಕ್ಕೆ, ಕರ್ನಾಟಕದ ವಿಕಾಸಕ್ಕೆ ನಿಮ್ಮ ಸಲಹೆಗಳೇನು? ಎಂಬುದರ ಬಗ್ಗೆ ನಿಮ್ಮ ಸಲಹೆ, ಚಿಂತನೆಗಳನ್ನು ದಯವಿಟ್ಟು ನನ್ನೊಡನೆ ಹಂಚಿಕೊಳ್ಳಿ. ಅದಕ್ಕಾಗಿ ದಯವಿಟ್ಟು ಈ ಮಾಹಿತಿಪತ್ರದ ಜೊತೆಗೆ ನೀಡಿರುವ ಜನಾಶಯ ಸಂಗ್ರಹ ಪತ್ರವನ್ನು ಸೂಕ್ತವಾಗಿ ತುಂಬಿ ನಮ್ಮ ಕಾರ್ಯಕರ್ತರಿಗೆ ಕೊಡಲು ವಿನಂತಿ. ನಿಮ್ಮಿಂದ ಅತಿಹೆಚ್ಚು ಉತ್ತಮ ಸಲಹೆಗಳು ಬಂದು ಅವುಗಳನ್ನೆಲ್ಲ ಕ್ರೋಢೀಕರಿಸಿ ಮಹದೇವಪುರ ಅಭಿವೃದ್ಧಿಗಾಗಿ ವಿವರವಾದ ರೂಪುರೇಷೆಯನ್ನು ಸಿದ್ಧಪಡಿಸೋಣ. ನಮ್ಮ ಆದರ್ಶ ಕ್ಷೇತ್ರವನ್ನು ನಾವೇ ಮುನ್ನಡೆಸೋಣ.



ನಿಮ್ಮವನೇ

**ಅರವಿಂದ ಲಿಂಬಾವಳಿ, ಶಾಸಕರು, ಮಹದೇವಪುರ ವಿಧಾನಸಭಾ ಕ್ಷೇತ್ರ**

**ಮಾಜಿ ಸಚಿವರು:** ಉನ್ನತ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕರ್ನಾಟಕ ಸರ್ಕಾರ

**ಸದಸ್ಯರು,** ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ

**ರಾಜ್ಯ ಪ್ರಧಾನ ಕಾರ್ಯದರ್ಶಿ,** ಬಿಜೆಪಿ ಕರ್ನಾಟಕ


### ಶಾಸಕರ ಕಾರ್ಯಾಲಯ

ಶ್ರೀ ಅರವಿಂದ ಲಿಂಬಾವಳಿ, ಕಿಶನ್ ಆರ್ಕೇಡ್, ಫರ್ನ್ ಸಿಟಿ ರಸ್ತೆ,
ದೊಡ್ಡ ನೆಕ್ಕುಂದಿ ಜಂಕ್ಷನ್, ಹೊರ ವರ್ತುಲ ರಸ್ತೆ, ಬೆಂಗಳೂರು 560037
ದೂರವಾಣಿ: 080 28511333 / 28511999
ಈಮೈಲ್:arvindlimbavali@gmail.com


ನಿಮ್ಮ ಅಭಿಪ್ರಾಯಗಳನ್ನು ಆನ್‌ಲೈನ್‌ನಲ್ಲಿ ನೀಡಲು ಈ ಕ್ಯೂಆರ್ ಕೋಡನ್ನು ನಿಮ್ಮ ಸ್ಮಾರ್ಟ್‌ಫೋನ್ ಮೂಲಕ ಸ್ಕ್ಯಾನ್ ಮಾಡಿ.

ವೆಬ್‌ಸೈಟ್: www.bjparvind.com

FACEBOOK arvindlimbavali.official | TWITTER bjparvind


ಪ್ರಕಟಣೆ: ಭಾರತೀಯ ಜನತಾ ಪಾರ್ಟಿ, ಮಹದೇವಪುರ. ಮುದ್ರಣ: ಚೈತನ್ಯ ಗ್ರಾಫಿಕ್ಸ್. ಪ್ರತಿಗಳು: 10,000